25 ಆಗಸ್ಟ್ 2025 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 166 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ

ಟೆಸ್ಟ್ ಪರಿಣಿತ, ಕಲಾತ್ಮಕ ಬ್ಯಾಟರ್ ಚೇತೇಶ್ವರ್ ಪೂಜಾರ ಅವರು ಅಂತರರಾಷ್ಟ್ರೀಯ ಟೆಸ್ಟ್ ಕ್ರಿಕೆಟಿಗೆ ಭಾನುವಾರ ವಿದಾಯ ಹೇಳಿದ್ದಾರೆ.

ಸ್ವರ್ಣಗೌರಿಯ ಮಾನಸ ಪುತ್ರ ವಿಘ್ನ ನಿವಾರಕ ಗಣೇಶ » 2

ದೇಶದ 3ನೇ ಅತ್ಯಂತ ಶ್ರೀಮಂತ ಸಿ.ಎಂ.ಸಿದ್ದರಾಮಯ್ಯ » 3

ಸ್ಮಶಾನಕ್ಕೆ ಶೀಘ್ರ ಜಾಗ ಗುರುತಿಸಿ ಮೀಸಲು » 4

ರುದ್ರಪ್ಪ ಲಮಾಣಿಗೆ ಕ್ಷಮೆಯಾಚಿಸಿದ ಕೆಎಂಶಿ

• ಪ್ರಜೋದಯ ವರದಿ

ಹಾಸನ: ವಿಧಾನಸಭೆ ಅಧಿವೇಶನದಲ್ಲಿ ಮಾತನಾಡುವ ವೇಗದಲ್ಲಿ ವಿಧಾನಸಭೆ ಉಪಾಧ್ಯಕ್ಷ ಹಾಗು ಬಂಜಾರ ಸಮಾಜದ ರುದ್ರಪ್ಪ ಲಮಾಣಿ ಅವರಿಗೆ ಮನಸ್ಸಿಗೆ ನೋವುಂಟಾಗುವ ರೀತಿಯಲ್ಲಿ ಮಾತನಾಡಿದ್ದು ಕ್ಷಮೆಯಾಚಿಸುತ್ತೇನೆಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಹೇಳಿದ್ದಾರೆ.

ಕೇಂದ್ರ ಹಾಗು ರಾಜ್ಯ ಸರ್ಕಾರಗಳ ಸಹಾಯಧನ ಯೋಜನೆಯ ಅನುದಾನ ಬಳಕೆ ವಿಚಾರದಲ್ಲಿ ಮಾತನಾಡುವಾಗ ಬಿಜೆಪಿ ನಾಯಕರು ಗಲಾಟೆ ಮಾಡಿದರು. ನಾನು ತಾಳ್ಮೆ ಕಳೆದುಕೊಂಡು ಗೊತ್ತಾಗದೆ ಪದ ಬಳಕೆ ಮಾಡಿದ್ದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. ಆ ಕ್ಷಣದಲ್ಲೇ ನಾನು ಆಡಿರುವ ಮಾತು ತಪ್ಪೆಂದು ಗೊತ್ತಾಗಿ ಕಡತದಿಂದ ಪದವನ್ನು ತೆಗೆದು ಹಾಕುವಂತೆ ಮನವಿ ಮಾಡಿದ್ದೆ. ಈ ಬಗ್ಗೆ ವಿಷಾದ ವ್ಯಕ್ತಪಡಿಸುತ್ತೇನೆಂದರು.

ಸಂವಿಧಾನ ತಿದ್ದುಪಡಿ: ಸಭೆ ತಿರಸ್ಕರಿಸಿದ ವಿಪಕ್ಷಗಳು

ಜನಪ್ರತಿನಿಧಿಗಳ ಪದಚ್ಯುತ ಪ್ರಕ್ರಿಯೆಗೆ ವಿರೋಧ | ಪ್ರಜಾಪ್ರಭುತ್ವ ನಾಶವೆಂದು ಆರೋಪ

• ಪ್ರಜೋದಯ ವರದಿ

ನವದೆಹಲಿ: ಸತತ 30 ದಿನ ಜೈಲುವಾಸಕ್ಕೆ ಒಳಗಾದರೆ ಪ್ರಧಾನಿ, ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿ ಮತ್ತು ಸಚಿವರನ್ನು ಹುದ್ದೆಯಿಂದ ಪದಚ್ಯುತಗೊಳಿಸಲು ಅವಕಾಶ ಕಲ್ಪಿಸುವ ಸಂವಿಧಾನ (130ನೇ ತಿದ್ದುಪಡಿ) ಮಸೂದೆಯನ್ನು ಪರಿಶೀಲಿಸುವ ಜಂಟಿ ಸಂಸದೀಯ ಸಮಿತಿಗೆ (ಜೆಸಿಪಿ) ಸೇರುವುದಿಲ್ಲವೆ ವಿರೋಧ ಪಕ್ಷಗಳು ಘೋಷಿಸಿವೆ.

ತೃಣಮೂಲ ಕಾಂಗ್ರೆಸ್, ಸಮಾಜವಾದಿ ಪಕ್ಷಗಳ ಬಳಿಕ ಅರವಿಂದ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಕ್ಷವೂ (ಎಎಪಿ) ಭಾನುವಾರ ಈ ಕುರಿತು ಹೇಳಿದೆ. ಪ್ರಸ್ತಾವಿತ ಕಾನೂನುಗಳ ಉದ್ದೇಶವು ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದಲ್ಲ, ಬದಲಿಗೆ ವಿರೋಧ ಪಕ್ಷಗಳ ಸರ್ಕಾರಗಳನ್ನು ಉರುಳಿಸುವುದಾಗಿದೆ. ಕೇಂದ್ರ ಸರ್ಕಾರ ತರಲು ಉದ್ದೇಶಿಸಿರುವ 3 ಮಸೂದೆಗಳು ಅಸಾಂವಿಧಾನಿಕ. ದೇಶದಲ್ಲಿ ಪ್ರಜಾಪ್ರಭುತ್ವವನ್ನು ಕೊನೆಗೊಳಿಸುತ್ತವೆಂದು ಎಎಪಿ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರು ಆರೋಪಿಸಿದ್ದಾರೆ.

ಭ್ರಷ್ಟಾಚಾರ ಹಾಗು ಬಿಜೆಪಿ ನಡುವಿನ ಸಂಬಂಧವು ಲೈಲಾಮಜ್ನು, ರೋಮಿಯೊಜೂಲಿಯೆಟ್ ಇದ್ದಂತೆ. ಪ್ರಧಾನಿ ಮೋದಿ ಮತ್ತು ಬಿಜೆಪಿಯವರು ಭ್ರಷ್ಟರನ್ನು ಪ್ರೀತಿ ಸುತ್ತಾರೆ. ಅಜಿತ್ ಪವಾರ್, ನಾರಾಯಣ ರಾಣೆ, ಜಿ.ಜನಾರ್ಧನ ರೆಡ್ಡಿ, ಬಿ.ಎಸ್.ಯಡಿಯೂರಪ್ಪ, ಮುಕುಲ್‌ರಾಯ್,

ಹಿಮವಂತ್ ಬಿಸ್ವಾ ಶರ್ಮಾ, ಸುವೇಂದು ಅಧಿಕಾರಿ ಯಾವ ಪಕ್ಷದಲ್ಲಿದ್ದಾರೆಂದು ಕುಟುಕಿದ್ದಾರೆ.

ಪ್ರಧಾನಿ, ಮುಖ್ಯಮಂತ್ರಿ ಮತ್ತು ಕೇಂದ್ರ, ರಾಜ್ಯ ಹಾಗು ಕೇಂದ್ರಾಡಳಿತ ಪ್ರದೇಶಗಳ ಸಚಿವರನ್ನು ಹುದ್ದೆಯಿಂದ ಪದಚ್ಯುತಿಗೊಳಿಸಲು ಸಾಧ್ಯವಾಗುವಂತಹ ಮೂರು ಮಸೂದೆ ಗಳನ್ನು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಂಡಿಸಿದೆ. ಸಂವಿಧಾನ (130ನೇ ತಿದ್ದುಪಡಿ) ಮಸೂದೆ 2025, ಕೇಂದ್ರಾಡಳಿತ ಸರ್ಕಾರ ತಿದ್ದುಪಡಿ ಮಸೂದೆ, ಜಮ್ಮು ಮತ್ತು ಕಾಶ್ಮೀರ ಪುನರ್ ರಚನೆ ತಿದ್ದುಪಡಿ ಮಸೂದೆ 2025 ಅನ್ನು ಗೃಹ ಸಚಿವ ಅಮಿತ್ ಶಾ ಅವರು ಮಂಡಿಸಿದ್ದಾರೆ.

ವಿರೋಧ ಪಕ್ಷಗಳ ವಾದ ಏನು

ಮಸೂದೆಗಳು ತೀವ್ರ ತುರ್ತುಪರಿಸ್ಥಿತಿಯತ್ತ (ಸೂಪರ್ ಎಮರ್ಜೆನ್ಸಿ) ಇಟ್ಟಿರುವ ಹೆಜ್ಜೆಯಾಗಿವೆ. ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಅಂತ್ಯಗೊಳಿಸುವ ಪ್ರಯತ್ನವಾಗಿದೆ. ಮಸೂದೆಯು ಕ್ರಿಮಿನಲ್ ನ್ಯಾಯದ ನ್ಯಾಯಶಾಸ್ತ್ರಕ್ಕೆ ವಿರುದ್ಧವಾಗಿದ್ದು, ಸಂಸದೀಯ ಪ್ರಜಾಪ್ರಭುತ್ವವನ್ನು ವಿರೂಪಗೊಳಿಸುತ್ತದೆ. ಅಧಿಕಾರ ದುರುಪಯೋಗಕ್ಕೆ ಬಾಗಿಲು ತೆರೆಯಲಿದ್ದು, ಸಂವಿಧಾನದತ್ತವಾದ ಎಲ್ಲಾ ರಕ್ಷೆಗಳನ್ನೂ ಗಾಳಿಗೆ ತೂರುತ್ತದೆ. ಸರ್ಕಾರದ ಮುಖ್ಯ ಹುದ್ದೆಗಳಲ್ಲಿರುವವರು 30 ದಿನ ಜೈಲುವಾಸ ಅನುಭವಿಸಿದರೆ, ವಿಚಾರಣೆಯ ಹಂತದಲ್ಲೇ ಅವರನ್ನು ಪದಚ್ಯುತಗೊಳಿಸಲು ಮಸೂದೆಯು ಅವಕಾಶ ನೀಡುತ್ತದೆ. ಆದರೆ, ನ್ಯಾಯಾಲಯದಲ್ಲಿ ಅಪರಾಧಿ ಎಂದು ಸಾಬೀತಾಗುವವರೆಗೆ ಅವರು ಕೇವಲ ಆರೋಪಿ ಆಗಿರುತ್ತಾರೆ ಎನ್ನುವುದು ನಮ್ಮ ಸಂವಿಧಾನದ ಮುಖ್ಯ ಅಂಶವಾಗಿದೆ. ಹಾಗಾಗಿ ಈ ಮಸೂದೆ ಸಂವಿಧಾನ ವಿರೋಧಿ ಎನ್ನುವುದು ವಿಪಕ್ಷಗಳ ವಾದವಾಗಿದೆ.

ಮಸೂದೆಯಲ್ಲಿ ಇರುವುದು ಏನು

ಸಂವಿಧಾನ (130ನೇ ತಿದ್ದುಪಡಿ) ಮಸೂದೆಯು ಸಂವಿಧಾನದ 75, 164 ಮತ್ತು 239ಎಎ ವಿಧಿಗಳಿಗೆ ತಿದ್ದುಪಡಿ ತರುವ ಉದ್ದೇಶ ಹೊಂದಿದೆ. ಕೇಂದ್ರ ಸಚಿವ ಸಂಪುಟಕ್ಕೆ ಪ್ರಧಾನಿ ಸೇರಿ ಸಚಿವರ ನೇಮಕ ಮತ್ತು ಅವರ ಜವಾಬ್ದಾರಿಗಳನ್ನು 75ನೇ ವಿಧಿಯು ವಿವರಿಸುತ್ತದೆ. 164ನೇ ವಿಧಿಯು ರಾಜ್ಯಗಳಲ್ಲಿ ಮುಖ್ಯಮಂತ್ರಿ ಹಾಗು ಸಚಿವರ ನೇಮಕ ಪ್ರಕ್ರಿಯೆ, ಅವರ ಹೊಣೆಗಾರಿಕೆಗಳೇನು ಎಂಬುದನ್ನು ತಿಳಿಸುತ್ತದೆ. 239ಎಎ ವಿಧಿಯು ರಾಷ್ಟ್ರೀಯ ರಾಜಧಾನಿ ದೆಹಲಿಯ ಆಡಳಿತಕ್ಕೆ ಸಂಬಂಧಿಸಿದಂತೆ ವಿಶೇಷ ಅವಕಾಶಗಳನ್ನು ಕಲ್ಪಿಸುತ್ತದೆ. 1991ರಲ್ಲಿ ಈ ವಿಧಿಯನ್ನು ಸಂವಿಧಾನಕ್ಕೆ ಸೇರ್ಪಡೆಗೊಳಿಸಲಾಗಿದ್ದು, ದೆಹಲಿ ಯಲ್ಲಿ ವಿಧಾನಸಭೆ ಸ್ಥಾಪನೆ ಮತ್ತು ಸಚಿವ ಸಂಪುಟ ರಚನೆಯ ಅಧಿಕಾರ ನೀಡಿದೆ. ಪೊಲೀಸ್, ಸಾರ್ವಜನಿಕ ಸುವ್ಯವಸ್ಥೆ ಮತ್ತು ಭೂಮಿಗೆ ಸಂಬಂಧಿಸಿದ ವಿಷಯಗಳನ್ನು ಬಿಟ್ಟು, ಉಳಿದ ವಿಚಾರಗಳಲ್ಲಿ ದೆಹಲಿಗೆ ಸೀಮಿತವಾಗಿ ಕಾನೂನುಗಳನ್ನು ರೂಪಿಸುವ ಅಧಿಕಾರವನ್ನು ದೆಹಲಿಯ ವಿಧಾನಸಭೆಗೆ ನೀಡಿದೆ.

ಅಧಿವೇಶನಕ್ಕೆ ಅಡ್ಡಿ: ಅಮಿತ್ ಶಾ ಖಂಡನೆ

ಸಂಸತ್ತು ಮತ್ತು ವಿಧಾನಸಭೆಗಳು ಚರ್ಚೆ ನಡೆಸುವ ಸ್ಥಳಗಳು ಕೇವಲ ರಾಜಕೀಯ ಲಾಭಕ್ಕಾಗಿ ಸದನವನ್ನು ನಡೆಯಲು ಬಿಡದೇ ಇರುವುದು ಸರಿಯಲ್ಲವೆಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹೇಳಿದ್ದಾರೆ. ವಿರೋಧ ಪಕ್ಷಗಳ ಪ್ರತಿಭಟನೆಗಳಿಂದ ಸಂಸತ್ತಿನ ಮುಂಗಾರು ಅಧಿವೇಶನ ವ್ಯರ್ಥವಾದ ಹಿನ್ನಲೆಯಲ್ಲಿ ಮಾತನಾಡಿರುವ ಅವರು, ಸಂಸತ್ತಿನಲ್ಲಿ ಚರ್ಚೆ ನಡೆಯಬೇಕು. ವಿರೋಧ ಪಕ್ಷಗಳು ಸಂಯಮದಿಂದ ವರ್ತಿಸಬೇಕು. ವಿರೋಧದ ಹೆಸರಿನಲ್ಲಿ ಸದನವನ್ನು ದಿನಗಟ್ಟಲೇ ಅಥವಾ ಅಧಿವೇಶನದುದ್ದಕ್ಕೂ ನಡೆಯಲು ಬಿಡದೆ ಇರುವುದು ಸರಿಯಲ್ಲ. ಈ ಬಗ್ಗೆ ದೇಶದ ಜನರು ಮತ್ತು ಚುನಾಯಿತ ಪ್ರತಿನಿಧಿಗಳು ಚಿಂತಿಸಬೇಕೆಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಡಿಕೆಶಿ ವಿರುದ್ಧ ಹರಿಹಾಯ್ದ ಮಾಜಿ ಸಚಿವ ರಾಜಣ್ಣ

• ಪ್ರಜೋದಯ ವರದಿ

ತುಮಕೂರು: ಅವರು ಆರ್‌ಎಸ್‌ಎಸ್ ಗೀತೆ ಹಾಡಬಹುದು, ಖಾಸಗಿ ಕಾರ್ಯ ಕ್ರಮದಲ್ಲಿ ಬಿಜೆಪಿ ನಾಯಕ ಅಮಿತ್ ಶಾ ಜೊತೆಗೆ ವೇದಿಕೆ ಹಂಚಿಕೊಳ್ಳ ಬಹುದು, ಏನು ಬೇಕಾದರೂ ಮಾಡ ಬಹುದು. ನಾವು ಏನೂ ಮಾತಾಡು ವಂತಿಲ್ಲ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಯಾಗ್‌ರಾಜ್‌ನ ಗಂಗೆಯಲ್ಲಿ ಸ್ನಾನ ಮಾಡಿದ ಮಾತ್ರಕ್ಕೆ ಬಡತನ ನಿವಾರಣೆಯಾಗುವುದಿಲ್ಲವೆಂದು ಎಐಸಿಸಿ ಅಧ್ಯಕ್ಷ ಮಲ್ಲಿ ಕಾರ್ಜುನ ಖರ್ಗೆ ಹೇಳಿದ್ದರು. ಅದರ ನಂತರವೂ ಡಿ.ಕೆ.ಶಿವಕುಮಾರ್ ಹೋಗಿ ಪುಣ್ಯ ಸ್ನಾನ ಮಾಡಿದರು. ಅಂಬಾನಿ ಮಗನ ಮದುವೆಯ ಆಮಂತ್ರಣವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸ್ವೀಕರಿಸುವುದಿಲ್ಲ. ಅಂತಹ ಮದುವೆಗೆ ಇವರು ಕುಟುಂಬ ಸಮೇತ ಹೋಗುತ್ತಾರೆಂದು ಕಿಡಿಕಾರಿದರು.

ನಾವು ಯಾವುದೇ ಶಾಸಕರ, ಮಂತ್ರಿಗಳ ಸಭೆ ಕರೆಯುವ ಹಾಗಿಲ್ಲ. ಬೇರೆ ಯವರು ಕರೆಯ ಬಹುದು, ಮಾತಾಡ ಬಹುದು. ಇದಕ್ಕೆಲ್ಲ ಸೂಕ್ತ ಸಮಯ ದಲ್ಲಿ ಉತ್ತರ ನೀಡಲಾಗುವುದು ಎಂದರು.

ಆರಂಭದಲ್ಲೇ ಸರ್ಕಾರ ಎಡವಿದೆ

ಧರ್ಮಸ್ಥಳದ ಅನಾಮಿಕ ತಲೆ ಬುರುಡೆ ತಂದುಕೊಟ್ಟ ತಕ್ಷಣ ಆತನ ಬಗ್ಗೆ ಪೂರ್ವಾಪರ ವಿಚಾರಿಸದೆ, 164 ಹೇಳಿಕೆ ಪಡೆದು ಎಸ್‌ಐಟಿ ರಚಿಸಲಾಯಿತು. ತನಿಖೆಯ ಪ್ರಾರಂಭಿಕ ಹಂತದಲ್ಲಿ ಎಲ್ಲರೂ ಎಡವಿದ್ದಾರೆಂದು ಹೇಳಿದರು.

ಎಲ್ಲಿಂದ ಬುರುಡೆ ತಂದಿದ್ದರು, ಕಾನೂನು ಪ್ರಕಾರವೇ ಗುಂಡಿಯಿಂದ ಬುರುಡೆ ಹೊರ ತೆಗೆಯಲಾಗಿದೆಯೇ? ಎಂಬುವುದನ್ನು ಪರಿಶೀಲಿಸಿದ್ದರೆ ಇಷ್ಟೆಲ್ಲಾ ರಾದ್ಧಾಂತ ಆಗುತ್ತಿರಲಿಲ್ಲ. ಧರ್ಮ ಸ್ಥಳಕ್ಕೆ ಅಪಕೀರ್ತಿ ತರುವ ಪ್ರಯತ್ನ ನಡೆಯಿತು. ಕೆಲ ಏಜೆನ್ಸಿಗಳು ವಿನಾಕಾರಣ ಈ ವಿಚಾರವನ್ನು ಬಹಳ ದೊಡ್ಡ ಮಟ್ಟಕ್ಕೆ ತೆಗೆದುಕೊಂಡು ಹೋದವು. ಕಂಡಲ್ಲಿ ಗುಂಡಿ ತೆಗೆದು ಅಲ್ಲಿನ ನಿವಾಸಿಗಳಿಗೆ ತೊಂದರೆ ನೀಡಲಾಯಿತು. ಪ್ರಾರಂಭದಲ್ಲಿ ಸಾಮಾನ್ಯಜ್ಞಾನ ಬಳಸಿದ್ದರೆ ಇದೆಲ್ಲ ಆಗುತ್ತಿರಲಿಲ್ಲ ಎಂದರು.

ಹೇಮಾವತಿ ನಾಲೆಯಲ್ಲಿ ಕಾರು ಪತ್ತೆ: ಹಲವು ಅನುಮಾನ

• ಪ್ರಜೋದಯ ವರದಿ

ಹೊಳೆನರಸೀಪುರ: ತಾಲ್ಲೂಕಿನ ಹಳೇಕೋಟೆ ಹೋಬಳಿ ಹರಳಹಳ್ಳಿ ಸಮೀಪದ ಹೇಮಾವತಿ ಎಡದಂಡೆ ನಾಲೆಯಲ್ಲಿ ಭಾನುವಾರ ಬೆಳಿಗ್ಗೆ ಕಾರೊಂದು ಪತ್ತೆಯಾಗಿದ್ದು ಪ್ರಕರಣದ ಸುತ್ತ ಹಲವು ಅನುಮಾನ ಹುಟ್ಟಿಕೊಂಡಿವೆ.

ಹಾಸನ ತಾಲ್ಲೂಕು ಕರಿಗೌಡನ ಕೊಪ್ಪಲು ಗ್ರಾಮದ ಪ್ರೇಮಕುಮಾರ್ (38) ಎಂಬುವವರಿಗೆ ಸೇರಿದ ಕಾರು ಆದಾಗಿದೆ. ಆದರೆ ಆತ ಆ.17 ರಿಂದ ನಾಪತ್ತೆಯಾಗಿದ್ದಾನೆ. ಪ್ರೇಮಕುಮಾರ್‌ನ ತಂದೆ ತಿಮ್ಮೇಗೌಡ ಶನಿವಾರವಷ್ಟೇ ಮಗ ನಾಪತ್ತೆಯಾಗಿರುವ ಕುರಿತು ಶಾಂತಿಗ್ರಾಮ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಮಾರನೇ ದಿನವೇ ನಾಲೆಯಲ್ಲಿ ಕಾರು ಪತ್ತೆಯಾಗಿರು ವುದು ಹಲವು ಸಂಶಯಗಳಿಗೆ ಕಾರಣವಾಗಿದೆ.

ಆತ್ಮಹತ್ಯೆ ಶಂಕೆ

ಕಾರು ಮಗುಚಿದ ರೀತಿಯಲ್ಲಿ ಪತ್ತೆಯಾಗಿದ್ದು ಒಂದು ಭಾಗದ ಕಿಟಕಿ ಸಂಪೂರ್ಣ ಒಡೆದಿದೆ. ಪ್ರೇಮಕುಮಾರ್ ವಿಪರೀತ ಸಾಲ ಮಾಡಿಕೊಂಡಿದ್ದ. ಸಾಲಗಾರರ ಕಿರುಕುಳ ತಾಳಲಾರದೆ ಕಾರು ಸಮೇತ ನಾಲೆಗೆ ಬಿದ್ದಿರಬಹುದೆಂದು ಶಂಕಿಸಲಾಗಿದೆ. ಭಾನುವಾರ ಇಡೀ ದಿನ ಪೊಲೀಸರು ಹಾಗು ಅಗ್ನಿಶಾಮಕ ಸಿಬ್ಬಂದಿ ಶೋಧ ಕಾರ್ಯ ನಡೆಸಿದರೂ ಶವ ಪತ್ತೆಯಾಗಿಲ್ಲ. ಮತ್ತೊಂದು ವಾದದ ಪ್ರಕಾರ ಸಾಲಗಾರರ ಕಿರುಕುಳ ತಾಳಲಾರದೆ ಪ್ರೇಮಕುಮಾರ್‌ನೇ ನಾಲೆಗೆ ಕಾರು ಬಿಟ್ಟು ನಾಪತ್ತೆಯಾಗಿರಬಹುದು. ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ನಂಬಿಸಲು ಹೀಗೆ ಮಾಡಿರಬಹುದು ಎನ್ನಲಾಗಿದೆ. ಅದಕ್ಕೆ ಪುಷ್ಟಿ ನೀಡಿದ್ದು ಪ್ರೇಮಕುಮಾರ್‌ನ ಮೊಬೈಲ್ ನಂಬರ್. ತನ್ನ ಆಧಾರ್ ಕಾರ್ಡ್ ಸಹಾಯದಿಂದ ಸಿಮ್ ಖರೀದಿಸಿದ್ದ ಆತ ಅದನ್ನು ಬಳಕೆಗಾಗಿ ತನ್ನ ಹೆಂಡತಿಗೆ ಕೊಟ್ಟಿದ್ದಾನೆ. ಭಾನುವಾರ ಬೆಳಿಗ್ಗೆ ಫೋನ್ ಮಾಡಿದಾಗ ರಿಂಗ್ ಆಯಿತಾದರೂ ಕರೆ ಸ್ವೀಕರಿಸಲಿಲ್ಲ. ಆ ಬಳಿಕ ಮೊಬೈಲ್ ಸ್ವಿಚ್ಡ್ ಆಫ್ ಆಗಿದೆ. ಮೊಬೈಲ್ ನೀರಿನಲ್ಲಿ ಮುಳುಗಿದ್ದರೆ ರಿಂಗ್ ಆಗುತ್ತಿರಲಿಲ್ಲ ಅಥವಾ ಮತ್ತೊಮ್ಮೆ ಕರೆ ಮಾಡಿದಾಗ ಸ್ವಿಚ್ಡ್ ಆಫ್ ಆಗುತ್ತಿರಲಿಲ್ಲ. ಆತನ ಹೆಂಡತಿಯೂ ಪೊಲೀಸರ ಸಂಪರ್ಕಕ್ಕೆ ಸಿಕ್ಕಿಲ್ಲ. ಹೀಗಾಗಿ ಇದು ವ್ಯವಸ್ಥಿತ ಪಿತೂರಿಯೋ ಅಥವಾ ಪ್ರೇಮಕುಮಾರ್ ನಾಲೆಯಲ್ಲಿ ಮುಳುಗಿ ದ್ದಾನೆಯೋ ಎಂಬ ಅನುಮಾನ ಕಾಡು ತ್ತಿದೆ. ದೊಡ್ಡ ಕುಂಚೇವು ಗ್ರಾಮದಲ್ಲಿ ಶವಕ್ಕಾಗಿ ಪೊಲೀಸರು ಸಂಜೆವರೆಗೆ ಶೋಧ ಕಾರ್ಯ ನಡೆಸಿದರು.

ಪ್ರೋತ್ಸಾಹ ಸಿಗದೆ ಕ್ರೀಡಾಪಟುಗಳ ಕನಸು ಆರಂಭದಲ್ಲೇ ಭಗ್ನ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಅನುದಾನ ಕೊರತೆಯಿಂದ ಕ್ರೀಡಾಕೂಟಕ್ಕೆ ಪ್ರೋತ್ಸಾಹ ಸಿಗದೆ ಪ್ರತಿಭಾನ್ವಿತ ವಿದ್ಯಾರ್ಥಿಗಳ ಕನಸು ಆರಂಭದಲ್ಲೇ ಭಗ್ನವಾಗುತ್ತಿದೆಯೆಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಭಾನುವಾರ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಯುವ ಸಬಲೀಕರಣ ಮತ್ತು ಶಾಲಾ ಶಿಕ್ಷಣ ಇಲಾಖೆ ಹಾಗು ತಾಲ್ಲೂಕು ದೈಹಿಕ ಶಿಕ್ಷಣ ಶಿಕ್ಷಕರ ಸಂಘದಿಂದ ಆಯೋಜಿಸಿದ್ದ 2025-26ನೇ ಸಾಲಿನ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿ, ಪಠ್ಯದಷ್ಟೇ ಕ್ರೀಡೆಗೂ ಮಹತ್ವ ನೀಡಬೇಕೆಂಬ ಮಾತು ಕ್ರೀಡಾಕೂಟಗಳ ಭಾಷಣಕ್ಕಷ್ಟೇ ಸಿಮೀತವಾಗಿದೆ. ಸೌಲಭ್ಯ ಮಾತ್ರ ಸಂಪೂರ್ಣ ಮರೀಚಿಕೆಯಾಗಿದ್ದು, ವರ್ಷದಿಂದ ವರ್ಷಕ್ಕೆ ಕ್ರೀಡಾಪಟುಗಳಲ್ಲಿ ಕ್ರೀಡಾ ಸ್ಫೂರ್ತಿ ಕಮರುತ್ತಿದೆ ಎಂದರು.

ರಾಜ್ಯದ ಮೂಲೆ ಮೂಲೆಗಳಿಂದಲೂ ಕ್ರೀಡಾ ಕ್ಷೇತ್ರದ ಹಿನ್ನಡೆಗೆ ಉದಾಹರಣೆಗಳು ಸಾಲು ಗಟ್ಟುತ್ತವೆ. ಅದಕ್ಕೆಲ್ಲಾ ಕಾರಣ ಹುಡುಕುತ್ತ ಹೋದರೆ ಕ್ರೀಡಾ ಕ್ಷೇತ್ರಕ್ಕೆ ನೀಡುತ್ತಿರುವ ಪ್ರೋತ್ಸಾಹ ಕಡಿಮೆ ಎನ್ನುವುದು ವೇದ್ಯವಾಗುತ್ತದೆ. ಸರ್ಕಾರ 500 ಕೋಟಿ ರೂ. ಅನುದಾನವನ್ನು ಕ್ರೀಡಾ ಇಲಾಖೆಗೆ ಮೀಸಲಿಟ್ಟರೆ ವ್ಯವಸ್ಥಿತವಾದ ಕ್ರೀಡಾಕೂಟಗಳ ಆಯೋಜನೆಯಿಂದ ಗ್ರಾಮೀಣ ಮಟ್ಟದಲ್ಲಿರುವ ಕ್ರೀಡಾಪಟುಗಳು ರಾಷ್ಟ್ರ ಮಟ್ಟದಲ್ಲಿ ಗುರುತಿಸುವ ಕೆಲಸ ಆಗುತ್ತದೆ ಎಂದರು.

ಕ್ರೀಡೆ ಶಿಕ್ಷಣದ ಅವಿಭಾಜ್ಯ ಅಂಗ. ಪಠ್ಯೇತರ ಚಟುವಟಿಕೆಯ ಜೊತೆಯಲ್ಲಿ ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಳ್ಳುವ ಸಲುವಾಗಿ ಕ್ರೀಡಾಕೂಟವನ್ನು ಏರ್ಪಡಿಸುವ ಮೂಲಕ ಕ್ರೀಡೆಯನ್ನು ಪ್ರೋತ್ಸಾಹಿಸಲಾಗುತ್ತಿದೆ. ಕ್ರೀಡೆಗೆ ಶಿಕ್ಷಣಕ್ಕೆ ಕೊಡುತ್ತಿರುವಷ್ಟೇ ಪ್ರಾಮುಖ್ಯತೆಯನ್ನು ನೀಡಲಾಗುತ್ತಿದ್ದು, ಈ ದಿಸೆಯಲ್ಲಿ ಕ್ರೀಡಾಪಟುಗಳು ಆಸಕ್ತಿ ಬೆಳೆಸಿಕೊಂಡು ಭವಿಷ್ಯ ರೂಪಿಸಿಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು. ಕ್ರೀಡೆಯಲ್ಲೂ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ರಾಜ್ಯ ಹಾಗು ರಾಷ್ಟ್ರ ಮಟ್ಟದಲ್ಲಿ ಉತ್ತಮ ಸಾಧನೆ ಮಾಡಿ ಪೋಷಕರಿಗೆ, ಶಾಲೆ ಹಾಗು ಶಿಕ್ಷಕರಿಗೆ ಗೌರವ ತರಬೇಕೆಂದರು.

ಮೈಸೂರು ದಸರಾಗೆ ತನ್ನದೇ ಆದ ಇತಿಹಾಸ ಇದೆ. ನಾಡಹಬ್ಬ ದಸರಾ ನೋಡಲು ಲಕ್ಷಾಂತರ ಜನರು ಬರುತ್ತಾರೆ. ಶ್ರದ್ಧಾ, ಭಕ್ತಿಗೆ ಸಾಕ್ಷಿಯಾದ ಮೈಸೂರು ದಸರಾ ಮಹೋತ್ಸವ ದಲ್ಲಿ ಏರ್ ಶೋಗೆ ಅನುಮತಿ ನೀಡಿರುವುದಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಅಭಿ ನಂದಿಸಿದ ಅವರು,

ಸ್ವರ್ಣಗೌರಿಯ ಮಾನಸ ಪುತ್ರ ವಿಘ್ನ ನಿವಾರಕ ಗಣೇಶ

ಭಾರತದಲ್ಲಿ ಪ್ರತಿ ವರ್ಷದ ಭಾದ್ರಪದ ಮಾಸದ ಶುಕ್ಲಪಕ್ಷದ ಚೌತಿಯ (ಚತುರ್ಥಿಯ) ದಿನದಂದು ಮಹಾ ಗಣಪತಿಯನ್ನು ಪೂಜಿಸಲಾಗುತ್ತದೆ. ಬೆಳ್ಳಿ ಅಥವಾ ಮಣ್ಣಿನಿಂದ ಮಾಡಿದ ಗಣಪತಿಯ ಮೂರ್ತಿಯನ್ನು ವಿಧ್ಯುಕ್ತವಾಗಿ ಪೂಜಿಸಿ, ವ್ರತವೆಂದು ಆಚರಿಸಲಾಗುತ್ತದೆ. ದೇಶದಲ್ಲಿ ಗಣೇಶ ಚತುರ್ಥಿಯು ಅತ್ಯಂತ ಶ್ರದ್ಧಾ ಭಕ್ತಿಗಳಿಂದ ಆಚರಿಸಲ್ಪಡುವ ಹಬ್ಬಗಳಲ್ಲಿ ಒಂದಾಗಿದೆ. ಇದು ವಿದ್ಯೆಯ ಮತ್ತು ಜ್ಞಾನದ ಅಧಿಪತಿ, ಸಂಪತ್ತು ಮತ್ತು ಅದೃಷ್ಟದ ಅಧಿ ನಾಯಕನಾದ ಗಣಪತಿಯ ಜನನವನ್ನು ಸಾರುವ ಹಬ್ಬ, ಈ ಹಬ್ಬವನ್ನು ವಿನಾಯಕ ಚತುರ್ಥಿ ಅಥವಾ ಗಣೇಶ ಚತುರ್ಥಿ ಇಲ್ಲವೇ ಚೌತಿ ಎಂದು ಸಹ ಕರೆಯುತ್ತಾರೆ. ಅದನ್ನು ಹಿಂದೂಗಳೆ ಲ್ಲರು ಶ್ರದ್ಧಾ ಭಕ್ತಿಗಳಿಂದ ಆಚರಿಸುತ್ತಾರೆ. ಹಬ್ಬದ ದಿನ ಮೋದಕ, ಕಡುಬು ಎಂಬ ಸಿಹಿ ತಿಂಡಿ ಯನ್ನು ಮಾಡಿ ಗಣೇಶನಿಗೆ ನೈವೇದ್ಯ ಮಾಡಿ ಹೀಗೆ ಹೀಗೆ ಪ್ರಾರ್ಥಿಸಲಾಗುತ್ತದೆ.

ಗಜಾನನಂ ಭೂತಗಣಾಧಿ ಸೇವಿತಂ ಕಪಿಷ್ಟ ಜಂಬೋ ಫಲಸಾರ ಭಕ್ಷಿತಂ ಉಮಾಸುತಂ ಶೋಕ ವಿನಾಶಕಾರಣಂ ನಮಾಮಿ ವಿಘ್ನೇಶ ಪಾದಪಂಕಜಂ

ಗುರು-ಹಿರಿಯರು ನಮಗೆ ಹೇಳಿರುವ ಕಥೆಗಳ ಪ್ರಕಾರ ಕೈಲಾಸಾಧಿಪತಿ ಶಿವನ ಪತ್ನಿ ಪಾರ್ವತಿಯು ಗಣಪತಿಯ ತಾಯಿ. ಕಥೆಯ ಪ್ರಕಾರ ಗಣಪನನ್ನು ಪಾರ್ವತಿಯು ಮಣ್ಣಿನಿಂದ ಒಂದು ವಿಗ್ರಹವನ್ನು ಮಾಡಿ ನಂತರ ಜೀವ ತುಂಬುವ ಮೂಲಕ ಜನ್ಮ ನೀಡಿದಳು. ಹಾಗಾಗಿ ಸ್ವರ್ಣಗೌರಿಯ ಮಾನಸ ಪುತ್ರನೀತ ಎಂದು ಹೇಳಲಾಗುತ್ತದೆ. ಗೌರಿ ತನ್ನ ಮೈಕೊಳೆಯಿಂದ ಆಕೃತಿಯೊಂದನ್ನು ಸೃಷ್ಟಿಸಿ ಅದಕ್ಕೆ ಜೀವ ತುಂಬಿ ಸ್ನಾನ ಮಾಡಲು ಹೋಗಿರುತ್ತಾಳೆ. ತಾಯಿಯ ಅಣತಿಯಂತೆ ಗಣಪನು ಮನೆಯನ್ನು ಕಾಯುತ್ತಿರುತ್ತಾನೆ. ಶಿವನು ಮನೆಗೆ ಹಿಂತಿರುಗಿದಾಗ ಗಣಪ ಅವನನ್ನು ತಡೆದು ಮನೆಯೊಳಗೆ ಹೋಗಲು ಅಡ್ಡಿಪಡಿಸುತ್ತಾನೆ. ಆದರಿಂದ ಕುಪಿತಗೊಂಡ ಶಿವ ತನ್ನ ತ್ರಿಶೂಲದಿಂದ ಅವನ ಶಿರವನ್ನು ಕತ್ತರಿಸುವನು.

ಸ್ನಾನ ಮುಗಿಸಿ ಬಂದ ಗೌರಿ ಮಗನ ಕಳೇಬರ ಕಂಡು ರೋದಿಸುತ್ತಾಳೆ. ಜೊತೆಗೆ ರೌದ್ರಾವತಾರ ತಾಳಿದ ಹೆಂಡತಿಯನ್ನು ಸಮಾಧಾನಪಡಿಸುವ ಸಲುವಾಗಿ ಶಿವ ತನ್ನ ಗಣಗಳನ್ನು ಕರೆದು ಉತ್ತರ ದಿಕ್ಕಿಗೆ ಯಾರಾದರೂ ತಲೆ ಹಾಕಿ ಮಲಗಿದ್ದರೆ ಅಂತಹವರ ತಲೆ ಯನ್ನು ಕತ್ತರಿಸಿ ತರುವಂತೆ ಆಜ್ಞಾಪಿಸುತ್ತಾನೆ. ಶಿವಗಣಗಳೆಲ್ಲರೂ ಹುಡುಕುತ್ತಾ ಹೋದಾಗ ಉತ್ತರ ದಿಕ್ಕಿನಲ್ಲಿ ಮಲಗಿದ್ದ ಮರಿಯಾನೆ ತಲೆಯನ್ನು ಕತ್ತರಿಸಿ ತರುತ್ತಾರೆ. ನಂತರ ಶಿವನು ಆನೆಯ ತಲೆಯನ್ನು ಗಣಪನ ಶರೀರಕ್ಕೆ ಅಂಟಿಸಿ ಜೀವದಾನ ಮಾಡುತ್ತಾನೆ. ಹೀಗಾಗಿ ಗಣಪ ಗಜಮುಖನಾಗಿ, ಗಣಗಳ ಅಧಿಪತಿ ಮತ್ತು ಮೊದಲ ಅಗ್ರ ಪೂಜೆಗೆ ಅರ್ಹನಾಗುತ್ತಾನೆ. ವಿಘ್ನ ವಿನಾಶಕ ವಿನಾಯಕನಾಗಿ ಶಾಶ್ವತ ಸ್ಥಾನವನ್ನು ಪಡೆದಿರುತ್ತಾನೆ. ಗಣೇಶನಿಗೆ ಸಂಬಂಧಿಸಿ ಬಹಳಷ್ಟು ಕಥೆಗಳಿವೆ. ಅವುಗಳಲ್ಲಿ ಒಂದು ಹೀಗಿದೆ.

ಒಮ್ಮೆ ಪಾರ್ವತಿ ಮತ್ತು ಪರಮೇಶ್ವರರು ತಮ್ಮ ಇಬ್ಬರು ಮಕ್ಕಳಾದ ಗಣೇಶ ಮತ್ತು ಸುಬ್ರಹ್ಮಣ್ಯರ ನಡುವೆ ಉನ್ನತ ಸ್ಥಾನವನ್ನು ನೀಡಲು ಬಯಸಿದ್ದರು. ಇಬ್ಬರನ್ನೂ ಕರೆದು ಒಂದು ಸ್ಪರ್ಧೆಯನ್ನು ಏರ್ಪಡಿಸಿದರು. ಬ್ರಹ್ಮಾಂಡವನ್ನು ಸುತ್ತಬೇಕು ಎಂಬುದು ಸ್ಪರ್ಧೆಯಾಗಿರುತ್ತದೆ. ಯಾರು ಮೊದಲು ಬಂದರೂ ಅವರಿಗೆ ಅತ್ಯುನ್ನತ ಹುದ್ದೆಯನ್ನು ವಹಿಸಿಕೊಡಲಾಗುತ್ತದೆ. ಸುಬ್ರಹ್ಮಣ್ಯ ತಕ್ಷಣ ತನ್ನ ನವಿಲಿನ ಹಿಂಭಾಗಕ್ಕೆ ಹತ್ತಿ ಅದರ ರೆಕ್ಕೆಗಳ ಮೇಲೆ ಹಾರಲು ಪ್ರಾರಂಭಿಸಿದನು. ಆದರೆ ಗಣಪತಿ ಹಾಗೇ ಉಳಿದರು. ಪಾರ್ವತಿ ಮತ್ತು ಪರಮೇಶ್ವರ ಅವರು ಗಣಪತಿ ಸ್ಪರ್ಧೆಯಿಂದ ಹೊರಗುಳಿದಿದ್ದಾರೆ ಎಂದು ಭಾವಿಸಿದ್ದರು. ಆದರೆ ದೂರದಲ್ಲಿ ಸುಬ್ರಹ್ಮಣ್ಯನನ್ನು ನೋಡಿದ ಗಣಪತಿಯು ಎದ್ದು ತಂದೆ ತಾಯಿಯರಿಗೆ ಪ್ರದಕ್ಷಿಣೆ ಹಾಕಿ ಕುಳಿತನು. ಓಟದಲ್ಲಿ ಗೆದ್ದಿದ್ದೇನೆ ಎಂದು ಗಣಪತಿ ಹೇಳಿದನು. ಪರಮೇಶ್ವರ ಅವರನ್ನು ಪ್ರಶ್ನಿಸಿದಾಗ, ಗಣಪತಿ ಉತ್ತರಿಸಿದರು. ಇಡೀ ಬ್ರಹ್ಮಾಂಡವು ಭಗವಂತನ ಪ್ರಕ್ಷೇಪಣವಾಗಿದೆ. ಭಗವಂತನು ವಿಶ್ವದಲ್ಲಿ ಅಂತರ್ಗತನಾಗಿದ್ದಾನೆ, ನಾನು ನನ್ನ ತಂದೆ ತಾಯಿಯಲ್ಲಿ ಭಗವಂತನನ್ನು ಕಂಡಿದ್ದೇನೆ. ಆದ್ದರಿಂದ ನಿಮ್ಮನ್ನು ಸುತ್ತಿದಾಗ, ನಾನು ಬ್ರಹ್ಮಾಂಡವನ್ನು ಸುತ್ತಿದ್ದೇನೆಂದು ಹೇಳಿದನು. ಗಣ ಪತಿಯೂ ಅವರನ್ನು ಕೇಳಿದನು. ನೀವು ಇಲ್ಲದ ಸ್ಥಳವನ್ನು ನನಗೆ ತೋರಿಸಿ. ನೀವು ಸರ್ವವ್ಯಾಪಿ. ನೀವು ಎಲ್ಲ ದರಲ್ಲೂ ಇದ್ದೀರಿ. ವಿನಾಯಕನು ಪ್ರದರ್ಶಿಸಿದ ತೀಕ್ಷ್ಣಬುದ್ಧಿವಂತಿಕೆಯಿಂದಾಗಿ, ವಿನಾಯಕನನ್ನು ಪರಮೇಶ್ವರನು ಗಣಗಳ ಮುಖ್ಯಸ್ಥನ ನ್ನಾಗಿ ಮಾಡಿ ಗಣಪತಿ ಎಂದು ಹೆಸರಿಸಿದನು. ತನ್ನ ಈಶ್ವರಾಂಶವನ್ನು ನೀಡಿ ಗಣೇಶನನ್ನಾಗಿ ಮಾಡಿದನು.

ಬೆಳಕು ಕತ್ತಲೆಯನ್ನು ಹೋಗಲಾಡಿಸುವಂತೆ, ಅಜ್ಞಾನದಿಂದ ಉಂಟಾಗುವ ಮನಸ್ಸಿನ ಅಂಧ ಕಾರವು ಜ್ಞಾನ ಅಥವಾ ಬುದ್ಧಿ ವಂತಿಕೆಯಿಂದ ದೂರವಾಗುತ್ತದೆ. ವಿಘ್ನೇಶ್ವರ ಎಂದೂ ಕರೆಯಲ್ಪಡುವ ವಿನಾಯಕನು ಈ ಭ್ರಮೆಯನ್ನು ಹೋಗಲಾಡಿಸಲು ಸಹಾಯ ಮಾಡುತ್ತಾನೆ ಮತ್ತು ಮನುಷ್ಯನು ತನ್ನ ಅಂತರ್ಗತ ದೈವಿಕ ಸ್ವಭಾವವನ್ನು ಗ್ರಹಿಸಲು ಅನುವು ಮಾಡಿಕೊಡುತ್ತಾನೆ. ವಿಘ್ನೇಶ್ವರನು ಬುದ್ಧಿಮತ್ತೆಗೆ ಅಧಿಪತಿಯಾಗಿದ್ದಾನೆ ಮತ್ತು ಅವನು ಭಕ್ತರಿಗೆ ಬುದ್ಧಿಯ ಪರಿ ಶುದ್ಧತೆ ಮತ್ತು ಸರಿ ಮತ್ತು ತಪ್ಪುಗಳ ನಡುವಿನ ತಾರ ತಮ್ಯದ ಶಕ್ತಿಯನ್ನು ಮತ್ತು ಶಾಶ್ವತ ಮತ್ತು ಕ್ಷಣಿಕವನ್ನು ನೀಡುತ್ತಾನೆ ಎಂಬ ನಂಬಿಕೆಯಿದೆ.

ಗಣೇಶ ಚತುರ್ಥಿ ಹಬ್ಬದಲ್ಲಿ ಮೊದಲ ದಿನ ತಾಯಿ ಸ್ವರ್ಣಗೌರಿಯ ಹಬ್ಬವಾಗಿರುತ್ತದೆ. ಮಾರನೆ ದಿನವೇ ಗಣೇಶನ ಹಬ್ಬ. ತಾಯಿಯನ್ನು ಮರಳಿ ಕರೆದುಕೊಂಡು ಹೋಗುವ ಕೆಲಸ ಗಣಪನದಾಗಿರುವುದರಿಂದ, ತಾಯಿ ಭೂಲೋಕಕ್ಕೆ ಬಂದ ಮಾರನೆ ದಿನವೇ ಅಜ್ಜಿ ಮನೆಗೆ ಬಂದು, ಅಜ್ಜಿ ಮನೆಯಲ್ಲಿ ಮಾಡಿದ ವಿವಿಧ ಭಕ್ಷ್ಯ ಭೋಜನಗಳನ್ನು ಭಕ್ಷಿಸಿ

ತಾಯಿಯೊಂದಿಗೆ ಹಿಂತಿರುಗುತ್ತಾನೆ ಎಂಬ ನಂಬಿಕೆಯೂ ನಮ್ಮಲ್ಲಿದೆ.

ಮೂಷಿಕ ವಾಹನ ಮೋದಕ ಹಸ್ತ ಚಾಮರ ಕರ್ಣ ವಿಳಂಬಿತ ಸೂತ್ರ ವಾಮನ ರೂಪ ಮಹೇಶ್ವರ ಪುತ್ರ ವಿಘ್ನ ವಿನಾಯಕ ಪಾದ ನಮಸ್ತೆ. ನಮ್ಮ ದೇಶದಲ್ಲಿ ಗಣಪತಿಯ ಪೂಜೆಯು ಅನಾದಿ ಕಾಲದಿಂದಲೂ ನಡೆದು ಬಂದಿದೆ. ಆನೆಗಳ ಹಿಂಡು ಹೊಲ ಗದ್ದೆಗಳಿಗೆ ನುಗ್ಗಿ ಬೆಳೆ ಗಳನ್ನು ಹಾಳು ಮಾಡುವುದನ್ನು ತಡೆಯುವ ಸಲುವಾಗಿ ರೈತಾಪಿ ಜನಗಳು ಆನೆಯ ಮುಖ ವುಳ್ಳ ದೇವನಾದ ಗಜಮುಖನನ್ನು ಪೂಜಿಸಿ ದರು. ಗೋದಾಮುಗಳಲ್ಲಿ ಧಾನ್ಯ

ಗಳನ್ನು ತಿಂದು ಹಾಳು ಮಾಡುವ ಇಲಿಗಳನ್ನೂ ಪೂಜಿ ಸಿದರು. ಹೀಗೆ ಇಬ್ಬರನ್ನೂ ಸಮಾಧಾನಿಸು ವುದೂ ಹಬ್ಬದ ಒಂದು ಕಾರಣವೆಂದು ಕೆಲವರು ಹೇಳುವರು. ಶುಕ್ಲಾಂಬರದರಂ ವಿಷ್ಣುಂ ಶಶಿ ವರ್ಣಂ ಚತುರ್ಭುಜಂ ಪ್ರಸನ್ನ ವದನಂ ಧ್ಯಾಯೇತ್ ಸರ್ವ ವಿಘ್ನೋಪ ಶಾಂತಯೇ ಎಂಬ ಪ್ರಾರ್ಥನೆ ಜಗತ್ತಿನಾದ್ಯಂತ ಪ್ರಸಿದ್ಧಿಯಾಗಿದೆ.

ಗಣೇಶನ ಪೂಜೆ ಮತ್ತು ಹಬ್ಬವು ಭಾರತದಲ್ಲಿ ಮಾತ್ರವಲ್ಲದೇ ಬರ್ಮಾ, ಮಲೇಶಿಯಾ, ಇಂಡೋನೇಶಿಯಾ, ಚೀನಾ, ಸುಮಾತ್ರಾ, ಜಾವಾ, ಜಪಾನ್ ಮತ್ತಿತರ ದೇಶಗಳಲ್ಲಿಯೂ ಪೂಜಿಸುತ್ತಾರೆ. ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ನೋಡಿದಾಗ ಲೋಕಮಾನ್ಯ ಬಾಲಗಂಗಾಧರ ತಿಲಕರು ಮಹಾರಾಷ್ಟ್ರದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಜನಗಳನ್ನು ಒಗ್ಗೂಡಿಸಲು ಆರಂಭಿಸಿದ ಸಾರ್ವಜನಿಕ ಗಣಪತಿ ಪೂಜೆ ಇಂದಿಗೂ ಹಾಗೆಯೇ ಮುಂದುವರೆಯುತ್ತಿದೆ. ನಮ್ಮ ಕರ್ನಾಟಕದಲ್ಲಿಯೂ ಗಣೇಶ ಚತುರ್ಥಿ ಹಬ್ಬವು ವಿಶೇಷವಾಗಿ ಸಡಗರ ಸಂಭ್ರಮಗಳಿಂದ ಆಚರಿಸಲಾಗುತ್ತದೆ. ಪ್ರಥಮೇಶ್ವರ ಗಣನಾಥನನ್ನು ಪೂಜಿಸಿ, ಪ್ರಾರ್ಥಿಸುವ ಮೂಲಕ ನಮ್ಮ ಮನೆ ಮನಗಳಿಂದ ಹಿಡಿದು ಇಡೀ ಲೋಕಕ್ಕೇ ಅಂಟಿರುವ ವಿಘ್ನಗಳನ್ನು ನಿವಾರಿಸೆಂದು ಬೇಡೋಣ. ಸರ್ವರಿಗೂ ಶುಭವಾಗಲೆಂದು ಪ್ರಾರ್ಥಿಸೋಣ .

-ಕೆ.ಎನ್.ಚಿದಾನಂದ

ಮಾನವ ಕೋಶ ಬ್ಯಾಕ್ಟೀರಿಯಾಗಳಿಂದಾಗಿವೆ !

ಕಳೆದ ವಾರ ಎರಡು ರೀತಿಯ ಕೋಶಗಳನ್ನು ನೋಡಿದೆವು. ಒಂದು ಪ್ರೋಕ್ಯಾರಿಯೋಟಿಕ್ ಮತ್ತು ಇನ್ನೊಂದು ಯೂಕ್ಯಾರಿಯೋಟಿಕ್. ಪ್ರೋಕ್ಯಾರಿಯೋಟಿಕ್ ಕೋಶದಲ್ಲಿರುವುದು ಒಂದಷ್ಟು ಕೋಶದ್ರವ ಒಂದು ತುಂಡು ನ್ಯೂಕ್ಲಿಯಿಕ್ ಆಮ್ಲ, ಒಂದಷ್ಟು ಪ್ರೊಟೀನ್, ಕಾರ್ಬೋಹೈಡ್ರೇಟ್, ಲಿಪಿಡ್, ಕರಗಿದ ಲವಣಗಳು, ಕ್ಲೋರೊಫಿಲ್ ನಂತಹ ಇನ್ನಿತರ ಸಾವಯವ ವಸ್ತುಗಳು. ಈಗ ಒಂದು ಸಯನೋಬ್ಯಾಕ್ಟೀರಿಯಾ ಇದೆ ಎಂದಿಟ್ಟುಕೊಳ್ಳಿ ಅದರಲ್ಲಿ ಕ್ಲೋರೊಫಿಲ್ ಇರುತ್ತದೆ. ಈ ಕ್ಲೋರೊಫಿಲ್ ಅದರ ಕೋಶಪೊರೆಗೆ ಅಂಟಿಕೊಂಡು ಆಹಾರ ತಯಾರಿ ಮಾಡುತ್ತದೆ. ಈಗ ಯೂಕ್ಯಾರಿಯೋಟಿಕ್ ಕೋಶದ ಅಂಗಕಣದ ಪೈಕಿ ಕ್ಲೋರೋ ಪ್ಲಾಸ್ಟ್ ಅನ್ನು ತೆಗೆದುಕೊಂಡರೆ ಇದಕ್ಕೂ ಒಂದು ಪೊರೆ ಇದೆ. ಅದನ್ನು ಥೈಲಕೊಯ್ಡ್ ಪೊರೆ ಎನ್ನುತ್ತೇವೆ. ಅದಕ್ಕೆ ಕ್ಲೋರೊಫಿಲ್‌ಗಳು ಅಂಟಿಕೊಂಡಿರುತ್ತವೆ. ಪ್ರತಿ ಕ್ಲೋರೋಪ್ಲಾಸ್ಟ್ ನ್ಯೂಕ್ಲಿಯಿಕ್ ಆಮ್ಲದ ಒಂದು ತುಣುಕನ್ನು ಹೊಂದಿರುತ್ತದೆ ಹಾಗೆಯೇ ಒಂದಷ್ಟು ಸಂಕೀರ್ಣ ದ್ರವ ಕೋಶದ್ರವದ ಹಾಗೆ. ಅಂದರೆ ನಿಮಗೆ ಕ್ಲೋರೋಪ್ಲಾಸ್ಟ್ ರಚನೆಯನ್ನು ನೋಡಿದಾಗ ಒಂದು ಸಯನೋ ಬ್ಯಾಕ್ಟೀರಿಯಾದ ನೆನಪಾಗುವುದಿಲ್ಲವೇ? ಹಾಗಾದರೆ ಇಂತಹ ಸರಳ ಪ್ರೋಕ್ಯಾರಿಯೋಟ್ ಗಳನ್ನು ನುಂಗಿ ಸಂಕೀರ್ಣವಾದ ಯೂಕ್ಯಾರಿಯೋಟ್ ಗಳಾದವೇ.

ಜೀವ ವಿಕಾಸದ ಹಾದಿಯಲ್ಲಿ ಹೀಗೆಯೇ ನಡೆದಿರಬೇಕು ಎಂದು ಊಹಿಸುತ್ತಾರೆ ಜೀವ ವಿಕಾಸ ವಿಜ್ಞಾನಿಗಳು. ಇದು ವಿವರಣೆ ಕೊಡಲು ಪ್ರಯತ್ನಿಸುವಾಗ ಕ್ಲೋರೋಪ್ಲಾಸ್ಟ್‌ನೊಂದಿಗೆ ವಿಜ್ಞಾನಿಗಳಿಗೆ ರೈಬೋಸೋಮ್‌ಗಳು ಮತ್ತು ಮೈಟೊಕಾಂಡ್ರಿಯಾಗಳು ಕಾಣಿಸಿದವು. ಬ್ಯಾಕ್ಟೀ ರಿಯಾ ಜೀವಕೋಶಗಳಂತೆ ಇವುಗಳು ನ್ಯೂಕ್ಲಿಯಿಕ್ ಆಮ್ಲಗಳ ತುಣುಕುಗಳನ್ನು ಹೊಂದಿವೆ. ಮೈಟೊಕಾಂಡ್ರಿಯಾಗಳು ಕೋಶದಲ್ಲಿ ಶಕ್ತಿ ಉತ್ಪಾದಕ ಕೇಂದ್ರಗಳು. ಪ್ರಕೃತಿಯಲ್ಲಿ ಶಕ್ತಿ ಉತ್ಪಾದಿಸುವ ಬ್ಯಾಕ್ಟೀರಿಯಾಗಳಿವೆ. ಅವುಗಳನ್ನು ಸೂಕ್ಷ್ಮ ಶಕ್ತಿ ಕೋಶಗಳು ಎನ್ನುತ್ತೇವೆ. ನಿಮ್ಮ ಮನೆಯ ಗೋಬರ್ ಗ್ಯಾಸ್ ಹೊಂದಲ್ಲಿರುವ ಮಿಥೇನ್ ಬ್ಯಾಕ್ಟೀರಿಯಾಗಳು ಇಂತಹ ಜೀವಿ ಗಳು. ರೈಬೋಸೋಮ್‌ಗಳು ಜೀವಕೋಶದ ಪ್ರೋಟೀನ್ ಕಾರ್ಖಾನೆಗಳು. ಅವುಗಳೂ ನ್ಯೂಕ್ಲಿ ಯಿಕ್ ಆಮ್ಲದ ಒಂದು ತುಣುಕನ್ನು ಹೊಂದಿವೆ ಬ್ಯಾಕ್ಟೀರಿಯಾಗಳ ಹಾಗೆ. ನಮ್ಮ ಕರುಳಿ ನಲ್ಲಿರುವ ಮತ್ತು ಬ್ಯಾಕ್ಟೀರಿಯಾಗಳು ಅಪಾರ ಪ್ರಮಾಣದ ಪುನರ್ ಸಂಯೋಜಿತ ಪ್ರೋಟೀನ್‌ಗಳನ್ನು ತಯಾರಿಸುತ್ತವೆ. ಆದ್ದರಿಂದ ಪ್ರತಿಯೊಂದು ಕಣದಂಗವೂ ಒಂದು ಪ್ರೋಕ್ಯಾರಿಯೋಟಿಕ್ ಕೋಶ ಅಥವಾ ಒಂದೊಂದು ಬ್ಯಾಕ್ಟೀರಿಯಾ. ಅಂದರೆ ಕ್ಲೋರೋಪ್ಲಾಸ್ಟ್ ಒಂದು ಸಯನೋ ಬ್ಯಾಕ್ಟರ್, ರೈಬೋಸೋಮ್ ಒಂದು. ಒಂದು ಮೈಟೊಕಾಂಡ್ರಿಯ ಒಂದು. ಈ ಆರ್ಗನೆಲ್ ಗಳಲ್ಲಿ ಸ್ವತಂತ್ರ ನ್ಯೂಕ್ಲಿಯಿಕ್ ಆಮ್ಲದ ತುಣುಕು ಇರುವುದರಿಂದ ಇವುಗಳನ್ನು ಕೋಶ ಉತ್ಪಾದಿಸಬೇಕಾಗಿಲ್ಲ. ಬದಲಾಗಿ ಅವುಗಳೇ ಪುನರುತ್ಪಾದನೆ ನಡೆಸಬಲ್ಲವು. ಕೋಶದೊಳಗೆ ಒಂದು ಮೈಟೊಕಾಂಡ್ರಿಯಾ ಇದ್ದರೆ ಸಾಕು ಅನೇಕ ಮೈಟೊಕಾಂಡ್ರಿಯಗಳಾಗಿ ಮರಿ ಮಾಡುತ್ತದೆ.

ರೈಬೋಸೋಮ್‌ಗಳು ಮತ್ತು ಹರಿದ್ರೇಣುಗಳಲ್ಲಿ ಕಂಡು ಬರುವ ಆ ಕೋಶದಿಂದ ಬರು ತ್ತದೆ. ಆದರೆ ಮೈಟೊಕಾಂಡ್ರಿಯಾದ ಹಾಗಲ್ಲ. ಅದು ತಾಯಿಯ ಬಳುವಳಿಯಾಗಿರುತ್ತದೆ. ಅಂದರೆ ಜೀವಿಗಳು ಲೈಂಗಿಕ ವಂಶಾಭಿವೃದ್ಧಿ ನಡೆಸುವಾಗ ಅವುಗಳ ಜೈವಿಕ ವಸ್ತುವಿನಲ್ಲಿ ಅರ್ಧಾಂಶ ತಂದೆಯಿಂದ ಬಂದರೆ ಉಳಿದರ್ಧ ತಾಯಿಯಿಂದ ಬರುತ್ತದೆ. ಆದರೆ ಮೈಟೊ ಕಾಂಡ್ರಿಯಾದಲ್ಲಿರುವ 100% ತಾಯಿಯಿಂದ ಬಂದದ್ದು. ಮೈಟೊಕಾಂಡ್ರಿಯ ಶಕ್ತಿ ಉತ್ಪಾ ದನಾ ಕೇಂದ್ರ. ಅದು ತಾಯಿಯ ಬಳುವಳಿ. ಆದ್ದರಿಂದ ಸ್ತ್ರೀ ಎಂದರೆ ಶಕ್ತಿ ಸ್ವರೂಪಿಣಿ. ಈಗಲಾ ದರೂ ತಿಳಿಯಿತೇ ಭಾರತಿಯರು ದುರ್ಗೆಯನ್ನು ಏಕೆ ಶಕ್ತಿ ಸ್ವರೂಪಿಣಿ ಎಂದು ಭಾವಿಸುತ್ತಾರೆ ಎಂದು. ನಮ್ಮ ಪೂರ್ವಜರ ಜೀವಶಾಸ್ತ್ರದ ಜ್ಞಾನ ಆ ಮಟ್ಟದ್ದಿರಬೇಕು. ಮಾನವ ಒಂದು ಯೂಕ್ಯಾರಿಯೋಟ್. ಅಂದರೆ ಮಾನವ ಕೋಶಗಳು ಹಲವು ಕಣದಂಗ ಗಳನ್ನು ಹೊಂದಿವೆ. ಅಂದರೆ ಹಲವು ಬ್ಯಾಕ್ಟೀರಿಯಾಗಳಂತೆ. ಅಂದರೆ ಮಾನವ ಜೀವಕೋಶಗಳು ಬ್ಯಾಕ್ಟೀರಿಯಾಗಳಿಂದಾಗಿವೆ ಎನ್ನೋಣವೇ?

ಈ ಲೇಖನದ ವಸ್ತುವನ್ನು ಒದಗಿಸಿದ್ದು ನನ್ನ ವಿದ್ಯಾರ್ಥಿ ಮತ್ತು ಮಿತ್ರ ಶ್ರೀ ಗೌತಮ ಅವನಿಗೆ ಧನ್ಯವಾದಗಳು. ಈ ಬ್ಯಾಕ್ಟೀರಿಯಾ ಕೋಶಗಳು ನಮ್ಮ ಜೀವಕೋಶದೊಳಗಡೆ ಸೇರುವುದು ಸಾಧ್ಯವೇ? ಸೇರಿದರೆ ಏನಾಗುತ್ತದೆ? ಮುಂದಿನವಾರ....

- ದಿವಾಕರ ಶೆಟ್ಟಿ ಎಚ್

ಮಧುರಕಂಠ ನಿನಾದ !

ಕೊರೊನಾ ಬಂದು ಮೊದಲನೇ ಬಾರಿ ಲಾಕ್ ಡೌನ್ ಆಗಿ ನಾವೆಲ್ಲ ಮನೆಯಲ್ಲೇ ಇರಬೇಕಾದ ಪರಿಸ್ಥಿತಿ ಬಂದದ್ದು ನೆನಪಿರಬೇಕಲ್ಲ, ಮನೆಯಲ್ಲೇ ಕುಳಿತು ಮೊಬೈಲ್ ನೋಡಿ ನೋಡಿ ಬೇಜಾರು ಬರುವಷ್ಟು ಗೃಹಬಂಧನ ಆಗಿಬಿಟ್ಟಿತ್ತು. ನಾನು ಸ್ವಲ್ಪ ಹಳ್ಳಿಪ್ರದೇಶದಲ್ಲಿ ವಾಸವಾಗಿ ರುವ ಕಾರಣ ಬೆಳಗ್ಗೆ ಮತ್ತು ಸಂಜೆ ಸ್ವಲ್ಪ ದೂರ ವಾಕಿಂಗ್ ಹೋಗಿ ಬರುತ್ತಿದ್ದೆ. ಹಾಗೆ ಹೋಗು ವಾಗ ಕ್ಯಾಮರಾ ಜೊತೆಗೆ ತೆಗೆದುಕೊಂಡು ಹೋಗುತ್ತಿದ್ದೆ. ನಮ್ಮ ಮನೆ ಇರುವಲ್ಲಿಂದ ಸ್ವಲ್ಪ ದೂರದಲ್ಲಿ ಒಂದು ಗೇರು ಮರಗಳು ಇರುವ ಗುಡ್ಡ ಇದೆ. ಗುಡ್ಡದ ನಡುವಿನ ಕಾಲುದಾರಿಯಲ್ಲಿ ನಡೆಯುತ್ತಾ ಗುಡ್ಡದ ತುದಿವರೆಗೂ ವಾಕಿಂಗ್ ಮಾಡಲು ತೀರ್ಮಾನಿಸಿದೆ. ಸಂಜೆಯ ಹೊತ್ತು ಆದ್ದರಿಂದ ಹಕ್ಕಿಗಳ ಚಿಲಿಪಿಲಿ ಕೇಳುತ್ತಿತ್ತು.

ನಡೆಯುತ್ತಿದ್ದ ದಾರಿಯ ಒಂದು ಬದಿಯಿಂದ ಶೋ..ಬೀ.. ಗೀ... ಎಂಬ ಕೂಗು ಕೇಳಿಸಿತು. ಸ್ವಲ್ಪ ದೂರದಿಂದ ಮತ್ತೆ ಅದೇ ಶೋ..ಬೀ..ಗೀ ಕೂಗು ಕೇಳಿತು. ನಾನು ನಡೆಯುವುದನ್ನು ನಿಲ್ಲಿಸಿ ನಿಂತುಬಿಟ್ಟೆ, ಶಬ್ದ ಬರುವ ಕಡೆಗೇ ಗಮನಿಸಲು ಆರಂಭಿಸಿದೆ. ಎರಡು ಹಕ್ಕಿಗಳು ಪರಸ್ಪರ ಬಹಳ ಗಹನವಾಗಿ ಚರ್ಚೆಮಾಡಿಕೊಳ್ಳುತ್ತಿವೆಯೇನೋ ಎಂಬಂತೆ ನಿರಂತವಾಗಿ ಪೊದೆಗಳ ಕಡೆ ಯಿಂದ ಧ್ವನಿಗಳು ಕೇಳುತ್ತಿತ್ತು. ಸ್ವಲ್ಪ ಹೊತ್ತಿನಲ್ಲೇ ಸುಮಾರು ಗುಬ್ಬಚ್ಚಿ ಗಾತ್ರದ ಎರಡು ಪುಟಾಣಿ ಹಕ್ಕಿಗಳು ಪರಸ್ಪರ ಮಾತನಾಡಿಕೊಳ್ಳುತ್ತಾ ಪೊದೆಯ ಸಂದಿಯಲ್ಲಿ, ಕೊಂಬೆಗಳ ಮೇಲೆ ಕುಪ್ಪಳಿಸುತ್ತಾ, ಎಲ್ಲ ಕಡೆ ಕೀಟಗಳ ಮೊಟ್ಟೆ, ಲಾರ್ವಾ, ಹುಳುಗಳನ್ನು ಹುಡುಕಿ ತಿನ್ನುತ್ತಾ ಚುರುಕಾಗಿ ಓಡಾಡುತ್ತಿದ್ದವು.

ಮರದ ಕೊಂಬೆಗಳಲ್ಲಿ ಅವುಗಳು ಓಡಾಡುತ್ತಿದ್ದರೆ ಆಕರ್ಷಕ ಹಳದಿ ಬಣ್ಣದ ಪುಟಾಣಿ ಚೆಂಡು ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ನೆಗೆದಂತೆ ಕಾಣಿತ್ತಿತ್ತು. ಗಂಡು ಮತ್ತು ಹೆಣ್ಣು ಹಕ್ಕಿಗ ಳೆರಡೂ ಹಳದಿ ಬಣ್ಣ, ರೆಕ್ಕೆಯ ಮೇಲೆ ಎರಡು ಬಿ

ದೇಶದ 3ನೇ ಅತ್ಯಂತ ಶ್ರೀಮಂತ ಸಿ.ಎಂ. ಸಿದ್ದರಾಮಯ್ಯ

• ಪ್ರಜೋದಯ ವರದಿ

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೇಶದ ಮೂರನೇ ಶ್ರೀಮಂತ ಸಿಎಂ ಆಗಿ ಹೊರ ಹೊಮ್ಮಿದ್ದಾರೆ.

ದೇಶದ ಅತ್ಯಂತ ಶ್ರೀಮಂತ ಮುಖ್ಯಮಂತ್ರಿಗಳ ಪಟ್ಟಿಯಲ್ಲಿ ಸಿಎಂ ಸಿದ್ದರಾಮಯ್ಯ ಅವರು 3ನೇ ಸ್ಥಾನದಲ್ಲಿದ್ದಾರೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ವರದಿ ನೀಡಿದೆ.

ದೇಶದ ಒಟ್ಟು 30 ಸಿಎಂಗಳ ಪಟ್ಟಿ ಬಿಡುಗಡೆ ಮಾಡಿದ್ದು, 30 ಸಿಎಂಗಳ ಒಟ್ಟು ಆಸ್ತಿ 1,632 ಕೋಟಿ ರೂ. ಗಳಷ್ಟಿದ್ದು, ಆಂಧ್ರಪ್ರದೇಶದ ಸಿಎಂ ನಾರಾ ಚಂದ್ರಬಾಬು ನಾಯ್ಡು ಅವರು ಒಟ್ಟು 931 ಕೋಟಿ ರೂ. ಮೌಲ್ಯದ ಆಸ್ತಿ ಹೊಂದುವ ಮೂಲಕ ಮೊದಲ ಸ್ಥಾನದಲ್ಲಿದ್ದರೆ, ಅರುಣಾಚಲ ಪ್ರದೇಶದ ಸಿಎಂ ಪೆಮಾ ಖಂಡು ಅವರು 332 ಕೋಟಿ ರೂ.ಗೂ ಹೆಚ್ಚು ಆಸ್ತಿ ಹೊಂದುವ ಮೂಲಕ ಎರಡನೇ ಸ್ಥಾನದಲ್ಲಿದ್ದಾರೆ.

ಇನ್ನು ಸಿದ್ದರಾಮಯ್ಯ ಅವರು 51 ಕೋಟಿ ರೂ. ಮೌಲ್ಯದ ಆಸ್ತಿಯೊಂದಿಗೆ ಮೂರನೇ ಸ್ಥಾನ ಪಡೆದುಕೊಂಡಿದ್ದಾರೆ.ಚುನಾವಣೆ ವೇಳೆ ಅಭ್ಯರ್ಥಿಗಳು ಸಲ್ಲಿಸಿದ ಅಫಿಡವಿಟ್ ಆಧರಿಸಿ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಮತ್ತು ನ್ಯಾಷನಲ್ ಎಲೆಕ್ಷನ್ ವಾಚ್ ಸಂಸ್ಥೆಯು ಭಾರತದ ಶ್ರೀಮಂತ ಮುಖ್ಯಮಂತ್ರಿಗಳ ಕುರಿತ ವರದಿ ಬಿಡುಗಡೆ ಮಾಡಿದೆ.

ಜೊತೆಗೆ ದೇಶದ 30 ಮುಖ್ಯಮಂತ್ರಿಗಳು (ಮಣಿಪುರವನ್ನು ರಾಷ್ಟ್ರಪತಿ ಆಳ್ವಿಕೆ ಇದ್ದ ಹಿನ್ನೆಲೆಯಲ್ಲಿ ಕೈಬಿಡಲಾಗಿದೆ) ಒಟ್ಟಾರೆ 1,600 ಕೋಟಿ ರು. ಆಸ್ತಿ ಹೊಂದಿದ್ದಾರೆ. ವಿಶೇಷವೆಂದರೆ 30 ಮುಖ್ಯಮಂತ್ರಿಗಳ ಒಟ್ಟಾರೆ ಆಸ್ತಿಯಲ್ಲಿ ಅರ್ಧಕ್ಕೂ ಹೆಚ್ಚು ಆಸ್ತಿಯನ್ನು ಆಂಧ್ರ ಮುಖ್ಯಮಂತಿಗಳೇ ಹೊಂದಿರುವುದು ವಿಶೇಷವಾಗಿದೆ.

ಮೂರನೇ ಸ್ಥಾನದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ ಅವರ ಒಟ್ಟು

51 ಕೋಟಿ ರೂ.ಗಳ ಆಸ್ತಿಯಲ್ಲಿ 21 ಕೋಟಿ ರೂ. ಚರ ಆಸ್ತಿಯಾದರೆ, 30 ಕೋಟಿ ರೂ. ಸ್ಥಿರ ಆಸ್ತಿಯಾಗಿದೆ.

ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ 30 ಕೋಟಿ ರೂಪಾಯಿ ಆಸ್ತಿಯೊಂದಿಗೆ ಏಳನೇ ಸ್ಥಾನವನ್ನು ಪಡೆದುಕೊಂಡಿದ್ದರೆ, ರಾಜಸ್ಥಾನದ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ (1.46 ಕೋಟಿ ರೂ.), ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ್ (1.54 ಕೋಟಿ ರೂ.), ಬಿಹಾರದ ನಿತೀಶ್ ಕುಮಾರ್ (1.64 ಕೋಟಿ ರೂ.), ಪಂಜಾಬ್‌ನ ಭಗವಂತ್ ಮಾನ್ (1.97 ಕೋಟಿ ರೂ.), ಒಡಿಶಾದ ಮೋಹನ್ ಚರಣ್ ಮಾಝಿ (1.97 ಕೋಟಿ ರೂ.) ಮತ್ತು ಛತ್ತೀಸ್‌ಗಢದ ವಿಷ್ಣು ದೇವ್ ಸಾಯಿ (3.80 ಕೋಟಿ ರೂ.) ಕಡಿಮೆ ಆಸ್ತಿ ಹೊಂದಿರುವ ಇತರ ಸಿಎಂಗಳಾಗಿದ್ದಾರೆ.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ 1.18 ಕೋಟಿ ರೂ., ಕೇಂದ್ರಾಡಳಿತ ಪ್ರದೇಶದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ 55.24 ಲಕ್ಷ ರೂ. ಗೂ ಹೆಚ್ಚು ಹಾಗೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ 15.38 ಲಕ್ಷ ರೂ.ಗೂ ಹೆಚ್ಚು ಆಸ್ತಿ ಹೊಂದುವ ಮೂಲಕ ಅತಿ ಕಡಿಮೆ ಆಸ್ತಿ ಹೊಂದಿರುವ ಮುಖ್ಯಮಂತ್ರಿಗಳಾಗಿದ್ದಾರೆ.

ಮಮತಾ ಬ್ಯಾನರ್ಜಿ ದೇಶದ ಅತ್ಯಂತ ಬಡ ಸಿಎಂತೃಣಮೂಲ ಕಾಂಗ್ರೆಸ್ ಅಧ್ಯಕ್ಷೆಯೂ ಆಗಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ದೇಶದ ಅತ್ಯಂತ ಬಡ ಸಿಎಂ. ಅವರ ಅವರ ಒಟ್ಟು ಘೋಷಿತ ಆಸ್ತಿ 15.38 ಲಕ್ಷ. ವಿಶೇಷವೆಂದರೆ ಅವರು ಯಾವುದೇ ಸ್ಥಿರ ಆಸ್ತಿ ಹೊಂದಿಲ್ಲ.

ಇನ್ನು ಅತ್ಯಂತ ಕಡಿಮೆ ಆಸ್ತಿ ಹೊಂದಿರುವವರ ಪಟ್ಟಿಯಲ್ಲಿ ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರೂ ಇದ್ದಾರೆ. ಅವರು ಒಟ್ಟಾರೆ 55.24 ಲಕ್ಷ ಚರ ಆಸ್ತಿ ಹೊಂದಿದ್ದಾರೆ. ಕೇರಳ ಸಿಎಂ ಪಿಣರಾಯಿ ವಿಜಯನ್ ಅವರು 1.18 ಕೋಟಿ ರೂಪಾಯಿಯ ಆಸ್ತಿ ಹೊಂದಿದ್ದಾರೆ.

11 ಮುಖ್ಯಮಂತ್ರಿಗಳು 1 ಕೋಟಿಗೂ ಹೆಚ್ಚು ಸಾಲ ಘೋಷಿಸಿದ್ದಾರೆ. ಅರುಣಾಚಲ ಪ್ರದೇಶ ಮುಖ್ಯಮಂತ್ರಿ ಪೆಮಾ ಖಂಡು ಹೆಸರಿನಲ್ಲಿ 180 ಕೋಟಿ ರು. ಸಾಲ ಇದೆ. ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 23 ಕೋಟಿ ರೂ. ಸಾಲ ಮಾಡಿದ್ದರೆ, ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು 10 ಕೋಟಿಗೂ ಹೆಚ್ಚು ಸಾಲ ಘೋಷಿಸಿದ್ದಾರೆ.

ದುಶ್ಚಟಗಳಿಂದ ದೂರವುಳಿದರೆ ಸಾಧನೆ ಸಾಧ್ಯ

• ಪ್ರಜೋದಯ ವರದಿ

ಅರಕಲಗೂಡು: ಯುವ ಜನಾಂಗ ದುಶ್ಚಟಗಳಿಂದ ದೂರವುಳಿದರೆ ಭವಿಷ್ಯದ ಬದುಕಿನಲ್ಲಿ ಏನನ್ನಾದರೂ ಸಾಧಿಸಲು ಸಾಧ್ಯವಾಗುತ್ತದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಪ್ರಕಾಶ್ ಮೊಗವೀರ್ ಸಲಹೆ ನೀಡಿದರು.

ತಾಲ್ಲೂಕಿನ ಹೊನ್ನವಳ್ಳಿ ಹೇಮಾವತಿ ಪ್ರೌಢಶಾಲೆಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಕಸವಾ ವಲಯದ ಸೋಮನಹಳ್ಳಿ ಕಾರ್ಯಕ್ಷೇತ್ರದ ಸಹಯೋಗದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿ ದಿಸೆಯಲ್ಲಿ ಓದಿಗೆ ಹೆಚ್ಚಿನ ಮಹತ್ವ ನೀಡಬೇಕು. ದುಶ್ಚಟ ಮತ್ತು ದುರಾಭ್ಯಾಸಗಳತ್ತ ಚಿತ್ತ ಹರಿಸದೆ ಉತ್ತಮ ನಡೆ, ಸಂಸ್ಕಾರ ಮೈಗೂಡಿಸಿಕೊಳ್ಳಬೇಕು ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಧನಪಾಲ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಶಿಕ್ಷಕ ಮಂಜುನಾಥ್, ಜ್ಞಾನ ವಿಕಾಸ ಕೇಂದ್ರದ ಸಮನ್ವಯ ಅಧಿಕಾರಿ ಸ್ವಪ್ನ, ಸ್ವಾತಿ, ಸೇವಾ ಪ್ರತಿನಿಧಿ ಬೇಬಿ, ಅಶ್ವಿನಿ ಇತರರಿದ್ದರು.

ಕುಂದು ಕೊರತೆ ಸಭೆ

• ಪ್ರಜೋದಯ ವರದಿ

ಹಾಸನ: ಜಿಲ್ಲಾ ಪಂಚಾಯತ್ ಹೊಯ್ಸಳ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೆ.1 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಮಟ್ಟದ ಅಲ್ಪಸಂಖ್ಯಾತ ಸಮುದಾಯದವರ ಕುಂದು ಕೊರತೆ ಸಭೆಯನ್ನು ಏರ್ಪಡಿಸಲಾಗಿದೆ.

ಈ ಸಂಬಂಧ ಅಲ್ಪಸಂಖ್ಯಾತರ ಸಮುದಾಯದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ) ಜನಾಂಗದವರಿಗೆ/ ಸಮುದಾಯದವರಿಗೆ ಸಂಬಂಧಿಸಿದಂತೆ ಕುಂದುಕೊರತೆ, ಆಹವಾಲು, ಮನವಿಗಳು ಇದ್ದಲ್ಲಿ, ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಆಕಾಶವಾಣಿ ಹಿಂಭಾಗ, ಸಾಲಗಾಮೆ ರಸ್ತೆ, ಹಾಸನ ಇಲ್ಲಿಗೆ ಆ.25 ರವರೆಗೆ ಸಲ್ಲಿಸಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ: 08172- 268373/ 08172-267373 ನ್ನು ಹಾಗೂ ಆಯಾ ತಾಲ್ಲೂಕು ಮಾಹಿತಿ ಕೇಂದ್ರಗಳನ್ನು ಸಂಪರ್ಕಿಸಲು ತಿಳಿಸಿದ್ದಾರೆ.

ಸೋಲಾರ್ ಮಾದರಿ ಗ್ರಾಮವಾಗಿ ಹಳ್ಳಿಮೈಸೂರು

• ಪ್ರಜೋದಯ ವರದಿ

ಹಾಸನ: ಹೊಳೆನರಸೀಪುರ ತಾಲ್ಲೂಕು ಹಳ್ಳಿಮೈಸೂರು ಗ್ರಾಮವನ್ನು ಸೋಲಾರ್ ಮಾದರಿ ಗ್ರಾಮವಾಗಿ ಕೇಂದ್ರ ಸರ್ಕಾರದ ಮಾಡೆಲ್ ಸೋಲಾರ್ ವಿಲೇಜ್ ಯೋಜನೆಗೆ ಆಯ್ಕೆಯಾಗಿದ್ದು ದಿನಾಂಕ 01.07.2025 ರಿಂದ 31.12.2025 ರವರೆಗೆ 6 ತಿಂಗಳು ಕಾಲಾವಕಾಶವನ್ನು ನೀಡಿದ್ದು ಸದರಿ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ಹಳ್ಳಿಮೈಸೂರು ಗ್ರಾಮ ವ್ಯಾಪ್ತಿಯ ಸಾರ್ವಜನಿಕರಲ್ಲಿ ಮನವಿ ಮಾಡಿದೆ.

ಯೋಜನೆಗಳ ವಿವರ: ಪ್ರಧಾನ ಮಂತ್ರಿ ಮುಫ್ ಬಿಜಲಿ ಯೋಜನೆ. ಅನುದಾನ 1ಏ ಸೋಲಾರ್ ಪ್ಯಾನಲ್ ಅಳವಡಿಸಿಕೊಂಡಲ್ಲಿ 30,000, 2ಏ

ಸೋಲಾರ್ ಪ್ಯಾನಲ್ ಅಳವಡಿಸಿಕೊಂಡಲ್ಲಿ 60,000, 3ಏ ಸೋಲಾರ್ ಪ್ಯಾನಲ್ ಅಳವಡಿಸಿಕೊಂಡಲ್ಲಿ 78,000 ಕೇಂದ್ರ ಸರ್ಕಾರದ ಸಹಾಯಧನ.

ಕುಸುಮ್-ಬಿ ಯೋಜನೆಯಡಿಯಲ್ಲಿ ಐ.ಪಿ ಸ್ಥಾವರಗಳಿಗೆ ಸೋಲಾರ್ ಮುಖಾಂತರ ವಿದ್ಯುದೀಕರಣ ಮಾಡಲು ಕೇಂದ್ರಸರ್ಕಾರದ 30%, ರಾಜ್ಯ ಸರ್ಕಾರದಿಂದ 50% ಸಹಾಯಧನ ಒಟ್ಟು 80%, ಬಾಕಿ 20% ಹಣವನ್ನು ಗ್ರಾಹಕರಿಂದ ಭರಿಸುವುದು. ಬೇಸಿಗೆಯಲ್ಲಿ ಹಗಲಿನ ವೇಳೆಯಲ್ಲಿ ರೈತರ ಐ.ಪಿ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕುಸುಮ್-ಸಿ ಐ.ಪಿ ಫೀಡರ್ ಲೇವೆಲ್ ಸೋಲಾರೈಸೇಶನ್ ಕಾರ್ಯ ಕ್ರಮದಡಿಯಲ್ಲಿ ಪ್ರತಿ ಎಕರೆ ಜಮೀನಿಗೆ 25,000 ಬಾಡಿಗೆ ನೀಡಲಾಗುವುದು.

ಮಾಹಿತಿಗಾಗಿ ಚಾ.ವಿ.ಸ.ನಿ.ನಿ ಹೊಳೆನರಸೀಪುರ ಉಪ ವಿಭಾಗ ಕಚೇರಿಗೆ ಭೇಟಿ ನೀಡಲು ಚಾ.ವಿ.ಸ.ನಿ.ನಿ., ಹೊಳೆನರಸೀಪುರ ಕಾರ್ಯ ಮತ್ತು ಪಾಲನಾ ಉಪವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ತಿಳಿಸಿದ್ದಾರೆ.

ಪರಿಸರ ಸಂರಕ್ಷಣೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯ

• ಪ್ರಜೋದಯ ವರದಿ

ಬೇಲೂರು: ಪ್ರತಿಯೊಬ್ಬರೂ ಮರ ಗಿಡಗಳನ್ನು ಸಂರಕ್ಷಿಸಿ, ಪರಿಸರ ಕಾಡು ಉಳಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ನಿಟ್ಟಿನಲ್ಲಿ ಲಯನ್ ಸೇವಾ ಸಂಸ್ಥೆ ಮುಂದಾಗಿರುವುದು ಶ್ಲಾಘನೀಯ ಎಂದು ಶಾಸಕ ಹೆಚ್ ಕೆ ಸುರೇಶ್ ಹೇಳಿದರು.

ತಾಲ್ಲೂಕಿನ ಕಾಚಿಹಳ್ಳಿ ಗಡಿ ಅರಣ್ಯ ಪ್ರದೇಶದಲ್ಲಿ ಲಯನ್ಸ್ ಸಂಸ್ಥೆ ಪ್ರಾಂತೀಯ 12 ರ ವತಿಯಿಂದ ಪ್ರಸಾದಿಹಳ್ಳಿ ಹಾಗೂ ಮಲಸಾವರ ಅರಣ್ಯ ಪ್ರದೇಶದಲ್ಲಿ ಸಸಿ ನೆಡುವುದು ಮತ್ತು ವೃಕ್ಷ ಬೀಜಗಳನ್ನು ಹಾಕುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಅಂತರಾಷ್ಟ್ರೀಯ ಲಯನ್ಸ್ ಸೇವಾ ಸಂಸ್ಥೆ ವತಿಯಿಂದ ಲಯನ್ಸ್

ಪ್ರಾಂತ್ಯ 12 ಹಾಗೂ ಅರಣ್ಯ ಇಲಾಖೆ ಸಹಾಯದೊಂದಿಗೆ 8000 ವೃಕ್ಷ ಬೀಜಾಂಕುಶ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಿದ್ದು ಇಲ್ಲಿ ಕೆಲವು ಸ್ಥಳಗಳನ್ನು ಗುರುತಿಸಿ ಸಸಿ ಹಾಗೂ ಬೀಜಗಳನ್ನು ಹಾಕುವುದರಿಂದ ಪರಿಸರ ಕಾಪಾಡುವುದಲ್ಲದೆ ಪರಿಸರ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಮರ ಗಿಡಗಳಿಲ್ಲದೆ ನಾವು ಉಸಿರಾಡಲು ಆಮ್ಲಜನಕವಿಲ್ಲದೆ ಸಾಕಷ್ಟು ತೊಂದರೆ ಆಗುತ್ತಿದ್ದು ಮುಂದಿನ ತಲೆಮಾರು ಕಷ್ಟ ಪಡಬೇಕಾಗುತ್ತದೆ ಅದನ್ನು ತಪ್ಪಿಸಲು ಈಗಿನಿಂದಲೇ ನಾವೆಲ್ಲರೂ ಮರ ಗಿಡಗಳನ್ನು ಸಂರಕ್ಷಿಸಿ, ಪರಿಸರ ಕಾಡು ಉಳಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಈ ನಿಟ್ಟಿನಲ್ಲಿ ಲಯನ್ ಸೇವಾ ಸಂಸ್ಥೆ ಮುಂದಾಗಿರುವುದು ಶ್ಲಾಘನೀಯ. ಪರಿಸರ ಉಳಿಸಲು ನಾವು ಕೂಡ ಇವರ ಸೇವಕಾರ್ಯಕ್ಕೆ ಕೈಜೋಡಿಸಿ ಪರಿಸರ ರಕ್ಷಿಸಿ ಪೋಷಣೆ ಮಾಡುವ ಕೆಲಸ ಮಾಡಲಾಗುತ್ತದೆ ಮುಂದೆ ಹೆಚ್ಚಿನ ಸಂಘ ಸಂಸ್ಥೆಗಳು ಕೂಡ ಇಂತಹ ಮಹತ್ವಕಾರ್ಯಕ್ಕೆ ಮುಂದಾಗುವಂತೆ ಹೇಳಿದರು.

ಲಯನ್ಸ್ ಜಿಲ್ಲಾ ರಾಜ್ಯಪಾಲರಾದ ಲಯನ್ಸ್ ಅರವಿಂದ ಶೆಣೈ ಮಾತನಾಡಿ ನಮ್ಮ ಲಯನ್ ಸೇವಾ ಸಂಸ್ಥೆ ವತಿಯಿಂದ ಈ ಬಾರಿ ಪರಿಸರ ಸಂರಕ್ಷಣೆ ಮಾಡುವ ಸಲುವಾಗಿ ಮಂಗಳೂರು ಕೊಡಗು ಹಾಸನ ಸೇರಿದಂತೆ ಒಟ್ಟು 50,000 ಗಿಡ ನೆಡಬೇಕೆಂಬ ಸಂಕಲ್ಪ ಹೊಂದಿದ್ದು, ಅದರಲ್ಲಿ ಬೇಲೂರು ತಾಲೂಕು ಸೇರಿದಂತೆ ಒಟ್ಟು 10,000 ಗಿಡಗಳನ್ನು ನೆಡುವ ಕಾರ್ಯಕ್ಕೆ ಇಲ್ಲಿ ಮುಂದಾಗಿದ್ದು ಅದರಲ್ಲಿ ಎಂಟು ಸಾವಿರ ಬೀಜ ಬಿತ್ತಿ ಉಳಿದ 2000 ಗಿಡಗಳನ್ನು ನೆಡುತ್ತಿದ್ದೇವೆ ಎಂದು ಎಂದು ತಿಳಿಸಿದರು.

ಲಯನ್ಸ್ ಸೇವಾ ಸಂಸ್ಥೆ ಮಾಜಿ ಅಧ್ಯಕ್ಷರಾದ ಡಾಕ್ಟರ್ ಚಂದ್ರಮೌಳಿ, ಎಂಪಿ ಪವಯ್ಯ, ಕೆ ಎಲ್ ಸುರೇಶ್ ,ಅಬ್ದುಲ್ ಲತೀಫ್, ಚಮರಾಜ್, ಕಾರ್ಯದರ್ಶಿ ಆದರ್ಶ, ದೊಡ್ಮನೆ ಪ್ರಭಾಕರ್ ಮಂಜುನಾಥ್ , ಮಾಜಿ ಅಧ್ಯಕ್ಷ ಬಿಟ್ರುವಳ್ಳಿ ಉಮೇಶ್, ಸುರೇಶ್, ಅರಣ್ಯ ಇಲಾಖೆ ಆರ್ ಎಫ್‌ಒ ಇತರರು ಹಾಜರಿದ್ದರು.

ಪಿಓಪಿ ಗಣೇಶ ವಿಗ್ರಹ ಪ್ರತಿಷ್ಠಾಪನೆ ನಿಷೇಧ

• ಪ್ರಜೋದಯ ವರದಿ

ಹಾಸನ: ಪ್ಲಾಸ್ಟರ್ ಆಫ್ ಪ್ಯಾರೀಸ್ (ಪಿ.ಓ.ಪಿ), ಹಾಗೂ ರಾಸಾಯನಿಕ ಗುಣವುಳ್ಳ ಗಣೇಶ ವಿಗ್ರಹಗಳನ್ನು ಮಾರಾಟ ಹಾಗೂ ವಿಸರ್ಜನೆಯನ್ನು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಮಾರಾಟ ಮತ್ತು ವಿಸರ್ಜನೆಯನ್ನು ತಡೆಹಿಡಿಯಲು ಆದೇಶಿಸಿದೆ.

ಅದರಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರ ಸುತ್ತೋಲೆ ಪ್ರಕಾರ 21-08-2023 ರಲ್ಲಿ ಪಿ.ಓ.ಪಿ ಮತ್ತು ರಾಸಾಯನಿಕ ಗುಣವುಳ್ಳ ಗಣೇಶ ವಿಗ್ರಹಗಳನ್ನು ಮಾರಾಟ ನಿರ್ಬಂಧಿಸಲು ತಿಳಿಸಲಾಗಿರುತ್ತದೆ. ಹಾಗೂ ಜಿಲ್ಲಾಧಿಕಾರಿಗಳು ಈ ಬಗ್ಗೆ ಕಠಿಣ ಕ್ರಮವಹಿಸಲು ತಿಳಿಸಿರುತ್ತಾರೆ. ಆದುದರಿಂದ ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೇಲ್ಕಂಡ ವಿಗ್ರಹಗಳನ್ನು ಮಾರಾಟ ಮತ್ತು ವಿಸರ್ಜ

ಸುವುದನ್ನು ನಿಷೇದಿಸಲಾಗಿರುತ್ತದೆ.

ಸಾರ್ವಜನಿಕರು ಹಾಗೂ ಮಾರಾಟಗಾರರು ಪಿ.ಓ.ಪಿ. ಗಣಪತಿಯನ್ನು ಬಳಸದಂತೆ ಸೂಚಿಸಿದೆ. ಒಂದು ವೇಳೆ ಮಾರಾಟಗಾರರು ಕಾನೂನು ವಿರುದ್ಧವಾಗಿ ಮಾರಾಟ ಮಾಡಿದ್ದಲ್ಲಿ ಕಾನೂನು ರೀತ್ಯಾ ಕ್ರಮವಹಿಸಲಾಗುವುದು ಎಂದು ಮಹಾನಗರ ಪಾಲಿಕೆಯ ಆಯುಕ್ತರು ತಿಳಿಸಿದ್ದಾರೆ.

ಸಕಲೇಶಪುರದಲ್ಲಿ ಶ್ರಾವಣ ಅಮಾವಾಸ್ಯೆ ಪೂಜೆ

• ಪ್ರಜೋದಯ ವರದಿ

ಸಕಲೇಶಪುರ: ಪಟ್ಟಣದ ಹಳೆ ಸಂತಾವೇರಿ ಸಮೀಪದ ಶನೇಶ್ವರ ಸ್ವಾಮಿ ದೇವಾಲಯದಲ್ಲಿ ಕೊನೆಯ ಶ್ರಾವಣ ಅಮಾವಾಸ್ಯೆ ಪೂಜೆಯನ್ನು ಭಕ್ತರು ಶನಿವಾರ ಸಂಭ್ರಮದಿಂದ ನೆರವೇರಿಸಿದರು.

ಶಾಸಕ ಸಿಮೆಂಟ್ ಮಂಜು ಅವರು ದೇವಸ್ಥಾನಕ್ಕೆ ಆಗಮಿಸಿ ದೇವರ ಆಶೀರ್ವಾದ ಪಡೆದು, ಸಕಲೇಶಪುರ ನಾಡಿನ ಹಿತ-ಕ್ಷೇಮ ಹಾಗು ಸಾರ್ವಜನಿಕರ ಕಲ್ಯಾಣಕ್ಕಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಪೂಜೆ ಬಳಿಕ ಮಾತನಾಡಿದ ಅವರು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಧರ್ಮಸ್ಥಳಕ್ಕೆ ಭೇಟಿ ನೀಡಿ ಮಂಜುನಾಥ ಸ್ವಾಮಿಯ ದರ್ಶನ ಪಡೆಯಬೇಕು. ಇತ್ತೀಚೆಗೆ ಹಿಂದೂ ದೇವಸ್ಥಾನಗಳು ಮತ್ತು ಧಾರ್ಮಿಕ ಕೇಂದ್ರಗಳ ವಿರುದ್ಧ ನಡೆದ ಷಡ್ಯಂತ್ರಗಳ ನಾಟಕಕ್ಕೆ ತೆರೆ ಬಿದ್ದಿದೆ.

ಧರ್ಮಸ್ಥಳದ ಮೇಲಿನ ನಂಬಿಕೆಯನ್ನು ಹಾಳುಮಾಡಲು ನಡೆದ ಎಡಪಂಥೀಯರ ಪ್ರಯತ್ನ ಇದೀಗ ಬಯಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವೀರೇಂದ್ರ ಹೆಗಡೆ ಅವರ ಸಮಾಜಮುಖಿ ಸೇವೆಗಳನ್ನು ಶ್ಲಾಘಿಸಿ, ಹೆಗಡೆ ಧರ್ಮಸ್ಥಳ ಕ್ಷೇತ್ರದ ಸಾಮಾಜಿಕ ಕಾಳಜಿ ಮತ್ತು ಸಮಾಜಮುಖಿ ಚಟುವಟಿಕೆಗಳು ಜನತೆಗೆ ಆದರ್ಶ ಪ್ರಾಯ ಎಂದು ಅಭಿಪ್ರಾಯಪಟ್ಟರು. ಭಕ್ತರು ಹಾಜರಿದ್ದರು.

ಪರಿಸರ ಸ್ನೇಹಿ ಗಣೇಶ ಮೂರ್ತಿ ತಯಾರಿಕಾ ಕಾರ್ಯಾಗಾರ

• ಪ್ರಜೋದಯ ವರದಿ

ಅರಕಲಗೂಡು: ವಿವಿಧ ರಾಸಾಯನಿಕಗಳಿಂದ ಜಲಮೂಲಗಳಿಗೆ ಆಗುತ್ತಿರುವ ಮಾಲಿನ್ಯವನ್ನು ತಪ್ಪಿಸುವ ಕುರಿತು ಅರಿವುಮೂಡಿಸಲು ಜೇಡಿ ಮಣ್ಣಿನಿಂದ ಪರಿಸರ ಸ್ನೇಹಿ ಗಣಪತಿಮೂರ್ತಿ ತಯಾರಿಕಾ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಸ್ವಸ್ಥ ಸಮಾಜ ನಿರ್ಮಾಣ ಸಮಿತಿ ಅಧ್ಯಕ್ಷ ಪ್ರದೀಪ್ ರಾಮಸ್ವಾಮಿ ಅವರು ತಿಳಿಸಿದರು.

ತಾಲ್ಲೂಕಿನ ಕೊಣನೂರು ಗಣಪತಿ ಪೆಂಡಾಲ್‌ನಲ್ಲಿ ಸ್ವಸ್ಥ ಸಮಾಜ ನಿರ್ಮಾಣ ಸಮಿತಿ ಆಯೋಜಿಸಿದ್ದ ಪರಿಸರ ಸ್ನೇಹಿ ಗಣಪತಿಮೂರ್ತಿ ತ

ಸ್ಮಶಾನಕ್ಕೆ ಶೀಘ್ರ ಜಾಗ ಗುರುತಿಸಿ ಮೀಸಲು

ಕಾಂಕ್ರಿಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದ ಶಾಸಕ ಸಿ.ಎನ್.ಬಾಲಕೃಷ್ಣ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಸ್ಥಳೀಯ ಜನತೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಪಟ್ಟಣದ ಹೊರ ವಲಯದಲ್ಲಿ ಸ್ಮಶಾನಕ್ಕೆ ಸ್ಥಳ ಗುರುತಿಸಿ ಕಾಯ್ದಿರಿಸಲಾಗುವುದು ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದ ಜನತಾ ಕಾಲನಿಯಲ್ಲಿ ಕಾಂಕ್ರಿಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಭಾನುವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಇಲ್ಲಿಯ ನಿವಾಸಿಗಳಿಗೆಂದೆ ಪ್ರತ್ಯೇಕವಾಗಿ ಅಗತ್ಯ ಸೌಲಭ್ಯಗಳೊಂದಿಗೆ ಸ್ಮಶಾನದ ವ್ಯವಸ್ಥೆ ಕಲ್ಪಿಸಲಾಗುವುದು ಎಂದರು.

ಸಾವು-ನೋವು ಸಂಭವಿಸಿದರೆ ಜಮೀನು ಉಳ್ಳ ಕುಟುಂಬಗಳಿಗೆ ಸಮಸ್ಯೆಯಾಗುವುದಿಲ್ಲ. ಆದರೆ ಜಮೀನು ಇಲ್ಲದೆ ಇರುವ ಸಮುದಾಯಗಳಿಗೆ ಅಂತ್ಯಸಂಸ್ಕಾರ ಕಾರ್ಯ ನೆರವೇರಿಸಲು ಅಗತ್ಯ ಸ್ಥಳ ಇಲ್ಲದಾಗಿದೆ. ಈ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಸ್ಮಶಾನದ ವ್ಯವಸ್ಥೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಹೆಚ್.ಹೊನ್ನೇನಹಳ್ಳಿ ಗ್ರಾಮದ ಬಳಿ ಶ್ರೀ ಮಸಳಿಕಮ್ಮ ದೇಗುಲ ಸೇರಿದಂತೆ ವ್ಯಾಪ್ತಿಯ ಜಮೀನುಗಳಿಗೂ ಅನುಕೂಲವಾಗುವಂತೆ ಸುಮಾರು 50 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗೂ ಸಹ ಚಾಲನೆ ನೀಡಲಾಗಿದೆ ಎಂದರು.

ಹಿರೀಸಾವೆ ಗ್ರಾಮ, ಕಾಲನಿ ಹಾಗೂ ಎಲ್ಲ ಬಡಾವಣೆಗಳಿಗೂ ಪ್ರತ್ಯೇಕವಾಗಿ ಗ್ರಾಮ ಪಂಚಾಯಿತಿ ಮೂಲಕ ಕುಡಿಯುವ ನೀರಿನ ವ್ಯವಸ್ಥೆ, ಬೀದಿ ದೀಪಗಳ ನಿರ್ವಹಣೆ ಹಾಗೂ ಚರಂಡಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಅನುದಾನಗಳ ಲಭ್ಯತೆಯ ಅನುಗುಣವಾಗಿ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಹೋಬಳಿ ಕೇಂದ್ರ ಹಿರೀಸಾವೆ ಗ್ರಾಮವು ದಿನದಿಂದ ದಿನಕ್ಕೆ ಹೆಚ್ಚು ಜನವಸತಿಯೊಂದಿಗೆ ಹಾಗೂ ವಾಣಿಜ್ಯ ಮತ್ತು ವ್ಯವಹಾರ ಕೇಂದ್ರವಾಗಿ ತಾಲ್ಲೂಕು ಹಂತಕ್ಕೆ ಬೆಳೆಯುತ್ತಿದೆ. ಇದಕ್ಕೆ ಅನುಗುಣವಾಗಿ ಅಗತ್ಯ ಸೌಕರ್ಯಗಳನ್ನು ಒದಗಿಸುವುದು ನಮ್ಮ ಜವಾಬ್ದಾರಿಯಾಗಿದೆ. ಹೆಚ್ಚಿನ ಅನುದಾನ ತಂದು ಸರ್ವತೋಮುಖ ಅಭಿವೃದ್ಧಿಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ರಾಜ್ಯ ಜೆಡಿಎಸ್ ಉಪಾಧ್ಯಕ್ಷ ಹೆಚ್.ಜಿ.ರಾಮಕೃಷ್ಣ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಜಯಮ್ಮ ಬೋರಯ್ಯ, ಮಾಜಿ ಅಧ್ಯಕ್ಷ ಹೆಚ್.ಈ.ಬೋರಯ್ಯ, ಹಿರೀಸಾವೆ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಜೆ.ಮಹೇಶ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಹೆಚ್.ಎಸ್.ರವಿಕುಮಾರ್, ಪ್ರಮುಖರಾದ ಬಾಬು, ವೆಂಕಟೇಶ್ ಹಾಗೂ ಇನ್ನಿತರರು ಇದ್ದರು.

ಶಾಂತಿಯುತ ಗಣೇಶೋತ್ಸವ ನಡೆಸಲು ಕ್ರಮ

• ಪ್ರಜೋದಯ ವರದಿ

ಅರಕಲಗೂಡು: ತಾಲ್ಲೂಕಿನಲ್ಲಿ ಗಣೇಶೋತ್ಸವವನ್ನು ಶಾಂತಿಯುತ ವಾಗಿ ಆಚರಿಸಲು ಅಗತ್ಯ ಕ್ರಮ ವಹಿಸಬೇಕು ಎಂದು ತಹಶೀಲ್ದಾರ್ ಕೆ.ಸಿ. ಸೌಮ್ಯ ತಿಳಿಸಿದರು.

ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ತಾಲ್ಲೂಕು ಮಟ್ಟದ ಅಂತರ ಇಲಾಖಾ ಅಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಗಣೇಶ ಹಬ್ಬದ ಪ್ರಯುಕ್ತ ಭಕ್ತರು ಗಣಪತಿ ಪ್ರತಿಷ್ಠಾಪನೆ ಸಂಬಂಧ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆ ಉಂಟಾಗದಂತೆ ಗಣೇಶೋತ್ಸವ ಆಚರಿಸಬೇಕು. ಬೆಳಕು, ನೀರಿನ ವ್ಯವಸ್ಥೆ ಹಾಗೂ ಆರೋಗ್ಯ ಇಲಾಖೆ ವತಿಯಿಂದ ತುರ್ತು ವೈದ್ಯಕೀಯ ನೆರವು, ಸೆಸ್ಕ್ ಮತ್ತು ಅಗ್ನಿಶಾಮಕ ಸಿಬ್ಬಂದಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು.

ಸಿಪಿಐ ವಸಂತಕುಮಾರ್, ಸಬ್ ಇನ್ಸ್‌ಪೆಕ್ಟರ್ ಕಾವ್ಯ, ಉಪ ತಹಶೀಲ್ದಾರ್ ಸಿ.ಸ್ವಾಮಿ, ತಾಲ್ಲೂಕು ಪಂಚಾಯಿತಿಅಧಿಕಾರಿ ಪ್ರಕಾಶ್, ಸಿಡಿಪಿಒ ವೆಂಕಟೇಶ್, ಪುರಸಭೆ ಮುಖ್ಯಾಧಿಕಾರಿ ನಾಗೇಂದ್ರ ಕುಮಾರ್ ಇತರರಿದ್ದರು.

ಸಂತೋಷದಾಯಕ ಬದುಕಿಗೆ ಭಗವದ್ಗೀತೆ ನೆರವು

• ಪ್ರಜೋದಯ ವರದಿ

ಬ್ರಹ್ಮಕುಮಾರಿ ಈಶ್ವರಿ ವಿ.ವಿ.ಯ ಬಿ.ಕೆ. ಚಂದ್ರಿಕಾ

ಆಲೂರು: ಭಗವದ್ಗೀತೆಯ ತತ್ವಗಳು ನಮ್ಮ ಜೀವನವನ್ನು ಅರ್ಥಪೂರ್ಣ ಮತ್ತು ಸಂತೋಷದಾಯಕವನ್ನಾಗಿಸಲು ಸಹಾಯ ಮಾಡುತ್ತವೆಯೆಂದು ಪಟ್ಟಣದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಸಹೋದರಿ ಬಿ.ಕೆ. ಚಂದ್ರಿಕಾ ಹೇಳಿದರು.

ಪಟ್ಟಣದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಆಧ್ಯಾತ್ಮಿಕ ಕೇಂದ್ರದಲ್ಲಿ ಆಯೋಜಿಸಿದ್ದ ಕೃಷ್ಣ ಜನ್ಮಾಷ್ಟಮಿ ಮತ್ತು ರಕ್ಷಾಬಂಧನ ಕಾರ್ಯಕ್ರಮದಲ್ಲಿ ಮಾತನಾಡಿ, ಪ್ರತಿಯೊಬ್ಬರು ಕೂಡ ಕೃಷ್ಣನ ಸಂದೇಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ನೆಮ್ಮದಿಯ ಬದುಕನ್ನು ರೂಪಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಮನುಷ್ಯನ ಜೀವನ ಕ್ಷಣಿಕವಾಗಿದ್ದು ಇರುವಷ್ಟು ದಿನ ಪ್ರೀತಿ, ವಿಶ್ವಾಸ, ಶಾಂತಿ, ಸಹನೆಯಿಂದ ಧರ್ಮದ ಹಾದಿಯಲ್ಲಿ ಬದುಕನ್ನು ಸಾಗಿಸಿದರೆ ಮಾನಸಿಕ ನೆಮ್ಮದಿ ಪ್ರಾಪ್ತಿಯಾಗುತ್ತದೆ. ಭಗವದ್ಗೀತೆಯಲ್ಲಿ ತನ್ನ ಸಂದೇಶಗಳನ್ನು ಶ್ರೀ ಕೃಷ್ಣ ಪರಮಾತ್ಮನು ನೀಡಿದ್ದು ಪ್ರತಿಯೊಬ್ಬರು ಅವುಗಳನ್ನು ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಭಗವದ್ಗೀತೆಯಲ್ಲಿ ಕೃಷ್ಣನು, ಫಲಿತಾಂಶಗಳ ಬಗ್ಗೆ ಚಿಂತಿಸದೆ ನಮ್ಮ ಕರ್ತವ್ಯ ಮಾಡುವುದರ ಮಹತ್ವವನ್ನು ಒತ್ತಿ ಹೇಳುತ್ತಾನೆ. ಕರ್ತವ್ಯಗಳನ್ನು ದೇವರಿಗೆ ಅರ್ಪಿಸುವ ಮೂಲಕ, ನಾವು ನಿರ್ಲಿಪ್ತ ಭಾವದಿಂದ ಅವುಗಳನ್ನು ನಿರ್ವಹಿಸಬೇಕು ಎಂದು ಹೇಳುತ್ತಾನೆ. ಇದು ಸ್ವಾರ್ಥ ರಹಿತ ಸೇವೆಯ ಮೂಲಕ ಮೋಕ್ಷವನ್ನು ಸಾಧಿಸಲು ಸಹಾಯ ಮಾಡುತ್ತದೆ. ದೇವರಿಗೆ ಸಂಪೂರ್ಣ ಶರಣಾಗತಿಯ ಮತ್ತು ನಿಸ್ವಾರ್ಥ ಭಕ್ತಿಯ ಮಾರ್ಗವನ್ನು ಬೋಧಿಸುತ್ತಾನೆ. ಎಲ್ಲಾ ದೇವರಲ್ಲಿ ಅವನು ಒಬ್ಬನೇ ಎಂದು ಹೇಳುತ್ತಾನೆ. ಭಕ್ತಿ ಮತ್ತು ಪ್ರೀತಿಯಿಂದ ಮಾಡಿದ ಯಾವುದೇ ಕಾರ್ಯವು ದೇವರಿಗೆ ತಲುಪುತ್ತದೆ ಮತ್ತು ಅದು ನಮ್ಮನ್ನು ಭವ ಬಂಧನಗಳಿಂದ ಮುಕ್ತಗೊಳಿಸುತ್ತದೆ ಎಂದು ಶ್ರೀಕೃಷ್ಣ ಹೇಳಿದ್ದಾನೆಂದು ಪ್ರತಿಪಾದಿಸಿದರು.

ಧರ್ಮ ಮತ್ತು ನೀತಿ, ಸಮತೋಲನ, ಸಾಮರಸ್ಯ ಈ ಸಂದೇಶಗಳು ಆಧ್ಯಾತ್ಮಿಕವಾಗಿ ಮಾತ್ರವಲ್ಲದೆ, ನಮ್ಮ ದೈನಂದಿನ ಜೀವನದಲ್ಲಿಯೂ ಬಹಳ ಮುಖ್ಯವಾಗಿವೆ ಎಂದು ಹೇಳಿದರು.

ಆಲೂರು ಶಾಖೆಯ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಸಹೋದರಿ ರಾಜಯೋಗಿನಿ ವಿಜಯ, ಆಲೂರು ಪ.ಪಂ. ಮಾಜಿ ಅಧ್ಯಕ್ಷ ಎ.ಹೆಚ್. ರಮೇಶ್, ಬಿಜೆಪಿ ತಾ. ಅಧ್ಯಕ್ಷೆ ಉಮಾ ರವಿ ಪ್ರಕಾಶ್, ಬೈರಾಪುರ ಗ್ರಾ.ಪಂ. ಮಾಜಿ ಅಧ್ಯಕ್ಷ ವೀರಭದ್ರ ಸ್ವಾಮಿ, ದೊಡ್ಡಕಣಗಾಲು ಗ್ರಾ.ಪಂ. ಮಾಜಿ ಅಧ್ಯಕ್ಷ ಹೀರಣ್ಣ ಗೌಡ, ಜೆಡಿಎಸ್ ಮುಖಂಡ ಕೆ.ವಿ. ಮಲ್ಲಿಕಾರ್ಜುನ್, ಹರ್ಷಿತ ಇದ್ದರು.

ಚಾಮುಂಡೇಶ್ವರಿಗೆ ಬಾನು ಮುಷ್ತಾಕ್ ಪೂಜೆ ಸಲ್ಲಿಸುವರೇ..?

• ಪ್ರಜೋದಯ ವರದಿ

ಬೆಂಗಳೂರು: ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಸಲ್ಲಿಸಿ ದೀಪ ಬೆಳಗುವುದರ ಮೂಲಕ ದಸರಾವನ್ನು ಉದ್ಘಾಟಿಸಬೇಕು. ಈ ಬಗ್ಗೆ ಸ್ಪಷ್ಟತೆ ಇಲ್ಲದೆ ಲೇಖಕಿ ಹಾಗೂ ಹೋರಾಟಗಾರ್ತಿ ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಿಸುವುದು ಸರಿಯಲ್ಲ ಎಂದು ಬಸನಗೌಡ ಪಾಟೀಲ್ ಯತ್ನಾಳ್ ಅವರು ಭಾನುವಾರ ಹೇಳಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ನಾನು ವೈಯಕ್ತಿಕವಾಗಿ ಶ್ರೀಮತಿ ಭಾನು ಮುಷ್ತಾಕ್ ಅವರನ್ನು ಲೇಖಕಿ ಹಾಗೂ ಹೋರಾಟಗಾರ್ತಿಯಾಗಿ ಗೌರವಿಸುತ್ತೇನೆ. ಆದರೆ, ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಸಲ್ಲಿಸಿ ದೀಪ ಬೆಳಗುವುದರ ಮೂಲಕ ದಸರಾವನ್ನು ಉದ್ಘಾಟಿಸುವುದು, ಅವರ ಸ್ವಂತ ಧಾರ್ಮಿಕ ನಂಬಿಕೆಗಳಿಗೆ ವಿರುದ್ಧವಾಗಿದೆ ಎಂದು ಹೇಳಿದ್ದಾರೆ.

ಇಸ್ಲಾಂ ಮೂರ್ತಿ ಪೂಜೆಯನ್ನು ಧಿಕ್ಕರಿಸಿ ಒಂದು ದೇವರು ಹಾಗೂ ಒಂದು ಗ್ರಂಥವನ್ನೇ ಒಪ್ಪಿಕೊಳ್ಳುತ್ತದೆ ಎಂಬ ನಂಬಿಕೆಯಲ್ಲಿ ಅವರು ಇನ್ನೂ ಇದ್ದಾರೆಯೇ, ಅಥವಾ ಎಲ್ಲಾ ಮಾರ್ಗಗಳೂ ಅಂತಿಮವಾಗಿ ಒಂದೇ ಮೋಕ್ಷಕ್ಕೆ ದಾರಿ ಮಾಡಿಕೊಡುತ್ತವೆ ಎಂದು ಅವರು ನಂಬುತ್ತಾರೆಯೇ ಎಂಬುದರ ಬಗ್ಗೆ ಶ್ರೀಮತಿ ಬಾನು ಮುಷ್ತಾಕ್ ಅವರು ಸ್ಪಷ್ಟನೆ ನೀಡುವುದು ಅಗತ್ಯ.

ಈ ಸ್ಪಷ್ಟತೆ ಇಲ್ಲದೆ, ದಸರಾ ಉದ್ಘಾಟಿಸುವುದು ಸರಿಯಲ್ಲ. ಆದರೆ, ದಸರಾ ಉತ್ಸವದ ಅಂಗವಾಗಿ ನಡೆಯುವ ಸಾಂಸ್ಕೃತಿಕ ಅಥವಾ ಕವಿಗೋಷ್ಠಿಯಂತಹ ಸಾಹಿತ್ಯ ಕಾರ್ಯಕ್ರಮಗಳನ್ನು ಉದ್ಘಾಟಿಸುವ ಅತಿಥಿಯಾಗಿ ಬಾನು ಮುಷ್ತಾಕ್ ಅವರು ಭಾಗವಹಿಸುವುದು ತಕ್ಕದ್ದಾಗಿದೆ ಎಂದು ತಿಳಿಸಿದ್ದಾರೆ.

ಗಗನಯಾತ್ರಿಗಳ ಸುರಕ್ಷತೆ: ಇಸ್ರೋದ ಸಂಯೋಜಿತ ಏರ್ ಡ್ರಾಪ್ ಪರೀಕ್ಷೆ ಯಶಸ್ವಿ

• ಪ್ರಜೋದಯ ವರದಿ

ನವದೆಹಲಿ: ಭವಿಷ್ಯದ ಗಗನಯಾನ ಕಾರ್ಯಾಚರಣೆಗಾಗಿ ಪ್ಯಾರಾಚೂಟ್ ಆಧಾರಿತ ವೇಗವರ್ಧನೆ ವ್ಯವಸ್ಥೆಯ ಯಶಸ್ವಿ ಪರೀಕ್ಷೆಯನ್ನು ಇಸ್ರೋ ಕೈಗೊಂಡಿದೆ. ಇಂಟಿಗ್ರೇಟೆಡ್ ಏರ್ ಡ್ರಾಪ್ ಪರೀಕ್ಷೆ ಯಶಸ್ವಿಯಾಗಿದೆ ಎಂದು ಇಸ್ರೋ ತನ್ನ ಪ್ರಕಟಣೆಯಲ್ಲಿ ಹೇಳಿದೆ.

ಇಸ್ರೋ, ಭಾರತೀಯ ವಾಯುಪಡೆ, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ), ಭಾರತೀಯ ನೌಕಾಪಡೆ ಮತ್ತು ಭಾರತೀಯ ಕರಾವಳಿ ಕಾವಲು ಪಡೆಗಳ ಜಂಟಿ ಸಹಭಾಗಿತ್ವದಲ್ಲಿ, ಇಂಟಿಗ್ರೇಟೆಡ್ ಏರ್ ಡ್ರಾಪ್ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಲಾಗಿದೆ. 2023ರಲ್ಲಿ ಇಸ್ರೋ ಕ್ರೂ ಎಸ್ಕೇಪ್ ಪರೀಕ್ಷೆ ನಡೆಸಿತ್ತು.

ಈ ಪರೀಕ್ಷೆಯಲ್ಲಿ, ಐಎಎಫ್‌ನ ಚಿನೂಕ್ ಹೆಲಿಕಾಪ್ಟರ್ ಬಂಗಾಳ ಕೊಲ್ಲಿಯಿಂದ ಸುಮಾರು 3 ಕಿ.ಮೀ ಎತ್ತರಕ್ಕೆ ಸಿಮ್ಯುಲೇಟೆಡ್ ಸಿಬ್ಬಂದಿ ಮಾಡ್ಯೂಲ್‌ನ್ನು ಹಾರಿಸಿತು. ನಂತರ ಅದು ಸುಮಾರು 4.5 ಟನ್ ತೂಕದ ಮಾಡ್ಯೂಲ್‌ನ್ನು ಸಮುದ್ರದ ಮೇಲೆ ಯಶಸ್ವಿಯಾಗಿ ಇಳಿಸುವ ಮೂಲಕ ಕಾರ್ಯಾಚರಣೆಯನ್ನು ಯಶಸ್ವಿಗೊಳಿಸಿತು.

ಗಗನಯಾನದ ಮೊದಲ ಸಿಬ್ಬಂದಿರಹಿತ ಕಾರ್ಯಾಚರಣೆ 2025ರ ಅಂತ್ಯದಲ್ಲಿ ನಡೆಯಲಿದೆ. ಇದರ ಭಾಗವಾಗಿ ಈ ಪ್ಯಾರಾಚೂಟ್ ಪರೀಕ್ಷೆ ನಡೆದಿದ್ದು, ಇಸ್ರೋ ತನ್ನ ಬಾಹ್ಯಾಕಾಶ ಕಾರ್ಯಾಚರಣೆಯತ್ತ ನಿರ್ಣಾಯಕ ಹೆಜ್ಜೆಯನ್ನಿಡುತ್ತಿದೆ.

ಈ ಕುರಿತು ಮಾತನಾಡಿರುವ ಇಸ್ರೋ ಅಧ್ಯಕ್ಷ ಡಾ. ವಿ. ನಾರಾಯಣನ್, ಮಹತ್ವಾಕಾಂಕ್ಷಿ ಗಗನಯಾನ ಬಾಹ್ಯಾಕಾಶ ಕಾರ್ಯಾಚರಣೆ ಸಿದ್ಧತೆಗಳು ಯಶಸ್ವಿಯಾಗಿ ನಡೆಯುತ್ತಿದ್ದು, ಇಂಟಿಗ್ರೇಟೆಡ್ ಏರ್ ಡ್ರಾಪ್ ಪರೀಕ್ಷೆ ನಮ್ಮ ನಿರೀಕ್ಷೆಯನ್ನು ಪೂರ್ಣಗೊಳಿಸಿದೆ ಎಂದು ಅವರು ಹೇಳಿದ್ದಾರೆ.

ಸಂಯೋಜಿತ ಏರ್ ಡ್ರಾಪ್ ಪರೀಕ್ಷೆಯಲ್ಲಿ ಒಟ್ಟು 10 ವಿಭಿನ್ನ ಪ್ಯಾರಾಚೂಟ್‌ಗಳು ಅನುಕ್ರಮವಾಗಿ ತೆರೆದು, ಸಿಬ್ಬಂದಿ ಮಾಡ್ಯೂಲ್‌ನ್ನು ನಿಧಾನವಾಗಿ ಲ್ಯಾಂಡಿಂಗ್ ವಲಯಕ್ಕೆ ಸುರಕ್ಷಿತವಾಗಿ ಕರೆತರುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ ಎಂದು ಭಾರತದ ಅಗ್ರಗಣ್ಯ ಪ್ಯಾರಾಚೂಟ್ ಪರಿಣತಿ ಪ್ರಯೋಗಾಲಯವಾದ ಆಗ್ರಾದ ವೈಮಾನಿಕ ವಿತರಣಾ ಸಂಶೋಧನೆ ಮತ್ತು ಅಭಿವೃದ್ಧಿ ಸ್ಥಾಪನೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಈ ಪರೀಕ್ಷೆಯು ಪ್ಯಾರಾಚೂಟ್‌ಗಳು ಕಡಿಮೆ ಎತ್ತರದ ಪರಿಸ್ಥಿತಿಗಳಲ್ಲಿ ಹೇಗೆ ವರ್ತಿಸುತ್ತವೆ ಎಂಬುದರ ಕುರಿತು ಉತ್ತಮ ತಿಳುವಳಿಕೆಯನ್ನು ನೀಡುತ್ತದೆ. ಗಗನಯಾತ್ರಿಗಳು ಭೂಮಿಗೆ ಹಿಂತಿರುಗಿದಾಗ, ಮೊದಲ ಪ್ಯಾರಾಚೂಟ್‌ಗಳು ಸಮುದ್ರದಿಂದ ಸುಮಾರು 7 ರಿಂದ 11 ಕಿ.ಮೀ ಎತ್ತರದಲ್ಲಿ ತೆರೆದುಕೊಳ್ಳುತ್ತವೆ. ಆ ಸಮಯದಲ್ಲಿ ಗಂಟೆಗೆ 700 ಕಿ.ಮೀ ವೇಗದಲ್ಲಿ ಭೂಮಿಯತ್ತ ಧಾವಿಸಿ ಬರುತ್ತಿರುವ ಸಿಬ್ಬಂದಿ ಮಾಡ್ಯೂಲ್, ತನ್ನ ವೇಗವನ್ನು ಕಡಿಮೆ ಮಾಡಿಕೊಳ್ಳಲು ಈ ಪ್ಯಾರಾಚೂಟ್ ನೆರವಾಗುತ್ತವೆ.

ಸಿಬ್ಬಂದಿ ಮಾಡ್ಯೂಲ್‌ನ 10 ಪ್ಯಾರಾಚೂಟ್‌ಗಳು ಸ್ಪ್ಲಾಶ್ ಡೌನ್ ಮಾಡುವ ಮೊದಲು, ಸಿಬ್ಬಂದಿ ಮಾಡ್ಯೂಲ್‌ನ ವೇಗವನ್ನು ಸುಮಾರು 25 ಪಟ್ಟು ಕಡಿಮೆ ಮಾಡುತ್ತದೆ.

ಅಂತಿಮ ಟಚ್‌ಡೌನ್‌ನಲ್ಲಿ, ಸಿಬ್ಬಂದಿ ಮಾಡ್ಯೂಲ್‌ನ ವೇಗವು ಗಂಟೆಗೆ ಸುಮಾರು 30 ಕಿ.ಮೀ. ಆಗಿರುತ್ತದೆ.

ಭಾರತದ ಗಗನಯಾನ ಯೋಜನೆ ದೇಶದ ಏಕೈಕ ಅತ್ಯಂತ ದುಬಾರಿ ಬಾಹ್ಯಾಕಾಶ ಕಾರ್ಯಾಚರಣೆಯಾಗಿದ್ದು, ಇದರ ವೆಚ್ಚ 10,000 ಕೋಟಿ ರೂ.ಗಳಿಗಿಂತ ಹೆಚ್ಚು ಎಂದು ಅಂದಾಜಿಸಲಾಗಿದೆ. ಭಾರತದ ಎಲ್ಲಾ ರಾಷ್ಟ್ರೀಯ ಸೌಲಭ್ಯಗಳು ಅದರ ಯಶಸ್ಸಿಗೆ ತಮ್ಮದೇ ಆದ ಕೊಡುಗೆ ನೀಡುತ್ತಿವೆ. ಈ ಪರೀಕ್ಷೆಯಲ್ಲಿ, ಭಾರತದ ಬಾಹ್ಯಾಕಾಶ ಸಂಸ್ಥೆ ಅಭಿವೃದ್ಧಿಪಡಿಸಿದ ತಂತ್ರಜ್ಞಾನದೊಂದಿಗೆ ಡಿಆರ್‌ಡಿಒದ ಪರಿಣತಿಯನ್ನು ಕೂಡ ಯಶಸ್ವಿಯಾಗಿ ಪರೀಕ್ಷಿಸಲಾಗಿದೆ.

ಚಗಚಗೆರೆಯಲ್ಲಿ ಮಹಾಪುಷ್ಪ ಯಾಗ

• ಪ್ರಜೋದಯ ವರದಿ

ಗಂಡಸಿ: ಹೋಬಳಿಯ ಧಾರ್ಮಿಕ ಕ್ಷೇತ್ರ ಚಗಚಗೆರೆ ಶ್ರೀ ಉದ್ಭವ ಶನೈಶ್ವರ ಸ್ವಾಮಿ ಸನ್ನಿಧಿಯಲ್ಲಿ ಲೋಕ ಕಲ್ಯಾಣಾರ್ಥವಾಗಿ ಶ್ರಾವಣ ಮಾಸದ ಬೆನಕನ ಅಮವಾಸ್ಯೆ ಪ್ರಯುಕ್ತ ಮಹಾ ಪುಷ್ಪ ಯಾಗ ನೆರವೇರಿಸಲಾಯಿತು.

ಸ್ವಾಮಿಯವರ ಉತ್ಸವ ಮೂರ್ತಿ ಹಾಗು ಯಾಗಕ್ಕೆ ಶ್ರೀ ಸ್ವಾಮಿಯವರಿಗೆ ಅರ್ಪಿಸಲು ವಿವಿಧ ಬಗೆಯ ಹೂವಿನ ಬುಟ್ಟಿಗಳನ್ನು ಹೊತ್ತ ಸುಹಾಸಿನಿಯರನ್ನು ಮಂಗಳವಾದ್ಯದ ವಾದ್ಯ ಗೋಷ್ಠಿಯೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಶ್ರೀ ಸ್ವಾಮಿ ಅವರ ಮೂಲ ಸನ್ನಿಧಿಗೆ ಕರೆತರಲಾಯಿತು.

ಚಗಚಗೆರೆ ಶ್ರೀ ಕ್ಷೇತ್ರ ಧರ್ಮಧ್ವಜ ಪ್ರತಿಷ್ಠಾನದ ಗೌರವಾಧ್ಯಕ್ಷ ಡಾ. ಕೃಷ್ಣಮೂರ್ತಿ ಅವರ ನೇತೃತ್ವದಲ್ಲಿ ಸ್ವಾಮಿಯವರಿಗೆ ಗಣಪತಿ ಪೂಜೆ, ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಬಿಲ್ವಾರ್ಚನೆ ನಂತರ ಮಹಾಪುಷ್ಪ ಯಾಗ ನೆರವೇರಿಸಲಾಯಿತು. ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಂತರ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಾವಿರಾರು ಭಕ್ತರಿಗೆ ಅನ್ನದಾಸೋಹ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಶ್ರೀ ಕ್ಷೇತ್ರ ಧರ್ಮಧ್ವಜ ಪ್ರತಿಷ್ಠಾನ ಅಧ್ಯಕ್ಷ ಹೆಚ್.ಎ. ಅನಿಲ್, ಪ್ರಧಾನ ಅರ್ಚಕ ಆನಂದಸ್ವಾಮಿ ಮತ್ತಿತರರಿದ್ದರು.

ಸಾರ್ವತ್ರಿಕ ಪ್ರಯೋಜನವಾದರೆ ಸಹಕಾರ ಸಂಘಗಳು ಸಾರ್ಥಕ

• ಪ್ರಜೋದಯ ವರದಿ

ಹೊಳೆನರಸೀಪುರ: ಸಮುದಾಯದಲ್ಲೇ ಹು